ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 24 ಜೂನ್ 20, 1982 ಬೆಲೆ 60 ಪೈಸೆ

ಬೀಡಿ ಕಾರ್ಮಿಕರ ಹೋರಾಟ

ಯಶಸ್ವೀ ಪಿಕೆಟಿಂಗ್, ಮಂಗಳೂರಿನಲ್ಲಿ ೨೦೦೦ಕ್ಕೂ ಮಿಕ್ಕಿ ಕಾರ್ಮಿಕರ ಬಂಧನ, ಲಾಠೀ ಚಾರ್ಜ್

ಸಿ. ಐ. ಟಿ. ಯು. ನೇತೃತ್ವದ ರಾಜ್ಯ ಬೀಡಿ ಫೆಡರೇಷನ್ನಿನ ಕರೆಯ ಮೇರೆಗೆ ಕೆಲವು ಬೇಡಿಕೆಗಳನ್ನು ಮುಂದಿಟ್ಟು ಜೂನ್ 15 ರಂದು ಪಿಕೆಟಿಂಗ್ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿರುವ ವರದಿಯಾಗಿದೆ.

ಮಂಗಳೂರಿನಲ್ಲಿ ಪಿಕೆಟಿಂಗ್ ನಡೆಸುತ್ತಿದ್ದ ಸಹಸ್ರಾರು ಕಾರ್ಮಿಕರನ್ನು ಪೋಲೀಸರು ಲಾಠೀ ಪ್ರಹಾರ ಮಾಡಿ ಥಳಿಸಿದ್ದಾರೆ; 2000ಕ್ಕೂ ಮಿಕ್ಕಿ (ಮಹಿಳಾ ಕಾರ್ಮಿಕರನ್ನೊಳಗೊಂಡು) ಕಾರ್ಮಿಕರನ್ನು ಬಂಧಿಸಿದ್ದಾರೆ.

ತುಮಕೂರು, ಕುಣಿಗಲ್ ಮತ್ತು ಕುಂದಾಪುರ ಇತ್ಯಾದಿ ಸ್ಥಳಗಳಿಂದ ಯಶಸ್ವಿ ಪಿಕೆಟಿಂಗ್ ಕಾರ್ಯಕ್ರಮದ ವರದಿ ಬಂದಿದ್ದು ವಿವರವಾದ ವರದಿಯನ್ನು ಮುಂದಿನವಾರ ಕೊಡಲಾಗುವುದು.

ಉಡುಪಿಯಲ್ಲಿ ಜಲಪ್ರಳಯದಿಂದ ತೀವ್ರಹಾನಿ

೧೯ ಸಾವು; ೮೦೦ ಕುಟುಂಬಗಳು ನಿರಾಶ್ರಿತರು

9-6-82ರ ಸಂಜೆಯಿಂದ ಧಾರಾಕಾರವಾಗಿ ಹಿಂದಿನ ದಾಖಲೆಗಳನ್ನು ಮುರಿದು ಎಡೆಬಿಡದೆ ಸುರಿದ ಮಳೆ ಮತ್ತು ಗಾಳಿಯ ಹೊಡೆತದಿಂದಾಗಿ ಉಡುಪಿ ನಗರ ಇದುವರೆಗೆ ಕಂಡರಿಯದ ದುರಂತವನ್ನಪ್ಪಿದೆ. ನಗರದ ಮಧ್ಯ ಭಾಗದಲ್ಲಿ ಹರಿದು ಹೋಗುವ ಕಲ್ಸಂಕದ ತೋಡಿನಲ್ಲಿ ಏರಿದ ನೆರೆನೀರು ದಾರಿಗಳಿಗೆ ನುಗ್ಗಿ ಹರಿದು ಸಿಕ್ಕಿದ್ದೆಲ್ಲವನ್ನು ಕೊಚ್ಚಿಕೊಂಡು ನಾಲ್ಕೈದು ಮೈಲು ದೂರದವರೆಗೆ ಹಾನಿಯನ್ನೆಸಗಿದೆ. ಕುಂಜಿಬೆಟ್ಟು, ಕಲ್ಸಂಕ ಪಣಿಯಾಡಿ, ಮೂಡನಿಡಂಬೂರು, ಮಠದಬೆಟ್ಟು, ಇಟ್ಟಕೊಡಂತೂರು ಕೊಡವೂರು, ತೊಟ್ಟಂ, ಕಲ್ಮಾಡಿ ಮಲ್ಪೆಗಳಲ್ಲಿಯೂ ನಗರದ ಇನ್ನೊಂದು ಭಾಗವಾದ ಕಿನ್ನಿಮೂಲ್ಕಿ ಅಂಬಲ್ಪಾಡಿ ಮತ್ತಿತರ ಕಡೆಯೂ ಎಸಗಿದ ಹಾನಿ 50 ಲಕ್ಷಕ್ಕು ಮಿಕ್ಕಿದ್ದಾಗಿದೆ. ಅನೇಕರು ತಮ್ಮ ಸರ್ವಸ್ವವನ್ನು ಕಳೆದುಕೊಂಡು ಗಂಜೀ ಕೇರಿಗಳಲ್ಲಿ ಆಶ್ರಯಪಡೆಯುವಂತಾಗಿದೆ. 19 ಮಂದಿ ನೆರೆಯಲ್ಲಿ ಕೊಚ್ಚಿ ಹೋಗಿ ಅಸುನಿಗಿದ್ದಾರೆ.

ಸಹಾಯ ಸಲ್ಲಿಸಲು ಮನವಿ

ಉಡುಪಿಯಲ್ಲಿ ನೆರೆ ಹಾವಳಿಯಿಂದಾದ ಅನಾಹುತದಲ್ಲಿ ಸಂತ್ರಸ್ತಗೀಡಾದವರಿಗೆ ಪುನರ್ನಿವೇಶನ ಕಲ್ಪಿಸಲು ಅನುಕೂಲವಾಗುವಂತೆ ಉದಾರ ಧನ ಸಹಾಯ ಸಲ್ಲಿಸಲು ಸಿ. ಪಿ. ಐ. (ಎಂ) ರಾಜ್ಯ ಸಮಿತಿ ಮನವಿ ಮಾಡಿದೆ.

ನೊಂದವರಿಗೆ ಪರಿಹಾರ ದೊರಕಿಸಲು, ಪುನರ್ನಿವೇಶನ ಕಲ್ಪಿಸಲು ನೆರವಾಗುವಂತೆ ಪಕ್ಷದ ಕಾರ್ಯಕರ್ತರು ಸಂಪೂರ್ಣ ಶ್ರಮಿಸಬೇಕೆಂದು ಪಕ್ಷದ ರಾಜ್ಯ ಸಮಿತಿ ಕರೆ ನೀಡಿದೆ.

ನೆರೆಪೀಡಿತರ ಪರಿಹಾರ ಕಾರ್ಯಗಳಿಗೆ ಸಹಾಯದ ಪ್ರವಾಹವೇ ಹರಿದು ಬರುತ್ತಿದೆ. ಇದು ಶುಭ ಸೂಚನೆಯಾದರೂ ಕೊಳಕು ರಾಜಕೀಯ ಇಲ್ಲಿಯೂ ನಡೆದಿದೆ ಎನ್ನುವುದು ಬೇಸರ ತರಿಸುತ್ತಿದೆ. ಪರಿಹಾರ ನೀಡುವಲ್ಲಿಯೂ ಸ್ವಾರ್ಥಿಗಳ ಕೈಮೇಲಾಗುತ್ತಿದೆ. ನಿರಾಶ್ರಿತರಲ್ಲದವರೂ ಬ್ಯಾಂಕು ಮತ್ತು ಸರಕಾರದ ಪ್ರಥಮ ಸಹಾಯ ಪಡೆಯುವಂತಾಗಿದೆ. ನಿರಾಶ್ರಿತರಲ್ಲಿ ಅರ್ಧದಷ್ಟು ಮಂದಿಗೆ ಪರಿಹಾರ ಇನ್ನು ಸಿಕ್ಕಬೇಕಾಗಿದೆ. ತಾ. 10-11 ರಂದು ನೀಡಿದ ಮೊತ್ತದ ದುರ್ಲಾಭ ಪಡೆದವರೆಷ್ಟು ಎಂಬುದು ಇನ್ನು ತಿಳಿಯಬೇಕಷ್ಟೆ.

ಮಂತ್ರಿಗಳಲ್ಲಿ ಸಂದರ್ಶನ ನಡೆಸಿ ನೀಡಿರುವ ಭರವಸೆಗಳು ಎಷ್ಟರಮಟ್ಟಿಗೆ ಈಡೇರಬಹುದು ಎಷ್ಟು ಮಂದಿಗೆ ಭದ್ರವಾದ ಮನೆಗಳು ದೊರೆಯಬಹುದು ಎಂಬುದೇ ಮುಖ್ಯ ಪ್ರಶ್ನೆಯಾಗಿದೆ. ತಗ್ಗುಪ್ರದೇಶಗಳಲ್ಲಿ ಬರೇ ಕಡಿಮೆ

(8ನೇ ಪುಟನೋಡಿ)

ಮುಂದಿನ ರಾಷ್ಟ್ರಾಧ್ಯಕ್ಷ ಯಾರು ?

ಈಗ ರಾಷ್ಟ್ರಾಧ್ಯಕ್ಷರಾಗಿರುವ ಶ್ರೀ ಸಂಜೀವರೆಡ್ಡಿಯವರ ಅವಧಿಯು ಬರುವ ತಿಂಗಳು ಮುಗಿಯಲಿದೆ. ತಾನು ಅಧ್ಯಕ್ಷನಾಗಿ ಮುಂದುವರಿಯಲು ಅಪೇಕ್ಷಿಸುವುದಿಲ್ಲವೆಂದು ಅನೇಕ ಬಾರಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಮುಂದಿನ ಅಧ್ಯಕ್ಷರು ಯಾರಾಗಬಹುದೆಂದು ಎಲ್ಲರೂ ಕುತೂಹಲದಿಂದ ಕಾಯುತ್ತಿದ್ದಾರೆ.

ಸಂಪಾದಕೀಯ

ರಾಷ್ಟ್ರಾಧ್ಯಕ್ಷರು ಅಧ್ಯಕ್ಷ ಪೀಠದಿಂದ ತನ್ನದೇ ಆದ ನಿಲುಮೆಯನ್ನನುಸರಿಸಲು ಈಗಿನ ಸಂವಿಧಾನದಲ್ಲಿ ಅವಕಾಶವಿಲ್ಲ. ಆದರೆ ಪ್ರಧಾನಿಯವರಿಗೆ ಸಲಹೆಯನ್ನು ಕೊಡುವ ಅಧಿಕಾರವಿರುತ್ತದೆ. ಆದರೆ ಮಂತ್ರಿ ಮಂಡಲದ ಸಲಹೆಗಳಿಗೆ ಮಾನ್ಯತೆಯನ್ನು ಕಡ್ಡಾಯವಾಗಿ ಕೊಡಬೇಕಾಗಿದೆ. ಆದರೂ ಅವಶ್ಯಬಿದ್ದಾಗ ತನ್ನ ಸೂಚನೆಗಳನ್ನು ಪ್ರಧಾನಿಯವರಿಗೆ ತಿಳಿಸಬಹುದು.

ಇತ್ತೀಚೆಗೆ ಶ್ರೀ ರೆಡ್ಡಿಯವರು ಕೊಟ್ಟ ಕೆಲವು ಅಭಿಪ್ರಾಯಗಳು ಸರಕಾರದ ನಿಲುವುಗಳಿಗೆ ವ್ಯತಿರಿಕ್ತವಾಗಿರುವುದು ಕಂಡು ಬಂದಿದೆ. ಹರಿಯಾಣದಲ್ಲಿ ರಾಜ್ಯಪಾಲ ಶ್ರೀ ತಪಾಸೆಯವರ ವರ್ತನೆಯನ್ನ ಖಂಡಿಸಿ ವಿರೋಧ ಪಕ್ಷಗಳ ಪ್ರತಿನಿಧಿಗಳು ಅಧ್ಯಕ್ಷರನ್ನು ಕಂಡಾಗ ಅವರು ಕಳವಳ ವ್ಯಕ್ತಪಡಿಸಿದರೆಂದು ಗೊತ್ತಾಗಿದೆ.

(8ನೇ ಪುಟ ನೋಡಿ)

ಸಿ.ಪಿ.ಐ. ಮತ್ತು ಸಿ.ಪಿ.ಐ (ಎಂ) ಪಕ್ಷಗಳ ರಾಜ್ಯ ಮಟ್ಟದ ಜಂಟೀ ರಾಜಕೀಯ ಸಮಾವೇಶದ ನಿರ್ಣಯ

ಜನರ ಸಮಸ್ಯೆಗಳ ಪರಿಹಾರಕ್ಕೆ ಹೋರಾಡಲು ಕರೆ

ಭಾರತ ಕಮ್ಯೂನಿಸ್ಟ್ ಪಕ್ಷ ಮತ್ತು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಇವುಗಳ ಕರ್ನಾಟಕ ರಾಜ್ಯ ಮಟ್ಟದ ಜಂಟಿ ಸಮಾವೇಶವು ಬೆಂಗಳೂರಿನಲ್ಲಿ ಜೂನ್ 11, 1982ರಂದು ಸೇರಿ, ಜಂಟಿ ಪ್ರಕಟಣೆಯನ್ನು ಚರ್ಚಿಸಿ ಸರ್ವಾನುಮತದಿಂದ ಅಂಗೀಕರಿಸಿದ ಬಳಿಕ ಈ ಕೆಳಗಿನ ಸಂಯುಕ್ತ ಕಾರ್ಯಾಚರಣೆಯ ನಿರ್ಣಯವನ್ನು ಕೈಗೊಳ್ಳುತ್ತದೆ :—

ಈ ಎರಡೂ ಪಕ್ಷಗಳು ಸಂಯುಕ್ತವಾಗಿಯೂ, ಎಲ್ಲ ಎಡ ಮತ್ತು ಪ್ರಜಾತಾಂತ್ರಿಕ ಪಕ್ಷಗಳ ಹಾಗೂ ಶಕ್ತಿಗಳ ಜೊತೆಗೂಡಿಯೂ ದುಡಿಯುವ ಜನರ ಹಕ್ಕುಗಳ ರಕ್ಷಣೆಗಾಗಿ, ಸಾಮಾನ್ಯ ಜನರ ಹಿತಾಸಕ್ತಿಗಳ ಸಾಧನೆಗಾಗಿ, ಪ್ರಜಾತಾಂತ್ರಿಕ ಹಕ್ಕುಗಳ ಸಂರಕ್ಷಣೆಗಾಗಿ, ಬಡತನ-ನಿರುದ್ಯೋಗಗಳಿಂದ ಜನರ ಕಷ್ಟಕಾರ್ಪಣ್ಯಗಳ ಪರಿಹಾರಕ್ಕಾಗಿ ಪ್ರಬಲವಾದ ಹಾಗೂ ರಾಜ್ಯವ್ಯಾಪಕವಾದ ಹೋರಾಟವನ್ನು ರೂಪಿಸಿ ಮುಂದೊತ್ತುವುದು ಇಂದಿನ ಆದ್ಯಕರ್ತವ್ಯವಾಗಿದೆ. ಈ ಹೋರಾಟಗಳಿಂದ ಜನರ ಜಾಗೃತಿ ಮತ್ತು ಸಂಘಟನೆ ಬೆಳೆಯುವುದರೊಂದಿಗೆ ಎಡ-ಪ್ರಜಾತಾಂತ್ರಿಕ ಶಕ್ತಿಗಳ ಐಕ್ಯವೂ ಬಲಹೊಂದಿ, ಇಂದಿನ ಜನವಿರೋಧಿ ಸರ್ವಾಧಿಕಾರಿ ಆಡಳಿತವನ್ನು ಕೊನೆಗಾಣಿಸಬಲ್ಲ ಹಾಗೂ ಜನತೆಯ ಹಿತಾಸಕ್ತಿಗಳಿಗೆ ಬದ್ಧವಾದ ಎಡ-ಪ್ರಜಾತಾಂತ್ರಿಕ ಆಡಳಿತವನ್ನು ರೂಪಿಸಬಲ್ಲ ಪರ್ಯಾಯ ರಾಜಕೀಯ ಶಕ್ತಿಯೊಂದು ರೂಪತಾಳುವುದೆಂಬ ಭರವಸೆ ನಮಗಿದೆ.

ಆದುದರಿಂದ ಜನತೆಯ ಈ ಕೆಳಗಿನ ಹಾಗೂ ಇತರ ತುರ್ತು ಬೇಡಿಕೆಗಳನ್ನು ಮುಂದಿಟ್ಟು ರಾಜ್ಯದ ಆದ್ಯಂತ ಸಂಯುಕ್ತವಾದ ಚಳವಳಿಯನ್ನೂ ಹೋರಾಟಗಳನ್ನೂ ಸಂಘಟಿಸಲು ಈ ಸಮಾವೇಶ ನಿರ್ಧರಿಸುತ್ತದೆ :—

1. ನಿತ್ಯ ಉಪಯೋಗದ ವಸ್ತುಗಳ ಬೆಲೆ ಏರಿಕೆಯನ್ನು ತಡೆಗಟ್ಟುವುದು, ದಾಸ್ತಾನುಗಾರಿಕೆ ಮತ್ತು ಕೃತಕ ಕೊರತೆ ಸೃಷ್ಟಿಸುವುದರ ವಿರುದ್ಧ ತೀವ್ರ ಕ್ರಮ ವಹಿಸುವುದು, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಪಟ್ಟಣಗಳಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ವಿಸ್ತರಿಸುವುದು.

2. ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಹಿಮ್ಮೆಟ್ಟಿಸಿ, ಕಾರ್ಮಿಕರಿಗೆ ಅನುಕೂಲಕರವಾದ ಕಾಯ್ದೆಗಳನ್ನು ಜಾರಿಗೆ ತರುವುದು, ರಾಷ್ಟ್ರೀಯ ಭದ್ರತಾ ಮತ್ತು ಅಗತ್ಯಸೇವಾ ಸಂರಕ್ಷಣಾ ಕಾಯ್ದೆಗಳು ಹಾಗೂ ಔದ್ಯಮಿಕ ವಿವಾದಗಳ ಮಸೂದೆಯನ್ನು ಹಿಂತೆಗೆಯುವುದು. ಔದ್ಯಮಿಕ ವಿವಾದಗಳಲ್ಲಿ ಪೋಲೀಸ್ ಹಸ್ತಕ್ಷೇಪವನ್ನು ಅಂತ್ಯಗೊಳಿಸುವುದು ಮತ್ತು ಕಾರ್ಮಿಕರಿಗೆ ಜೀವನವೇತನ ದೊರಕಿಸುವುದು.

(8ನೇ ಪುಟ ನೋಡಿ)

ಜಾರ್ಜಿ ದಿಮಿತ್ರೋವ್:
ಅಂತರರಾಷ್ಟ್ರೀಯ ಕಾರ್ಮಿಕ ಮಹಾ ನಾಯಕ

—ಬಿ. ಟಿ. ರಣದಿವೆ

ಜಾಗತಿಕ ಕಮ್ಯುನಿಸ್ಟ್ ಚಳುವಳಿಗೆ ಕಮ್ಯುನಿಸ್ಟ್ ಇಂಟರ್ ನ್ಯಾಷನಲ್‌ನ ಏಳನೇ ಕಾಂಗ್ರೆಸಿನಲ್ಲಿ (1935) ಹೊಸ ಆಯಾಮವೊಂದನ್ನು ನೀಡಿದ ಜಾರ್ಜಿ ದಿಮಿತ್ರೋವ್‌ರವರ ಐತಿಹಾಸಿಕ ಪಾತ್ರವನ್ನು ಹೊಸ ಪೀಳಿಗೆಯ ಕೆಲವರಷ್ಟೆ ಬಲ್ಲರು. ಇದೇ ಕಾಂಗ್ರೆಸಿನಲ್ಲಿ ದಿಮಿತ್ರೋವ್‌ರವರು ಮಹಾ ಕಾರ್ಯದರ್ಶಿಯಾಗಿ ಚುನಾಯಿಸಲ್ಪಟ್ಟರು.

ಫ್ಯಾಸಿಸ್ಟರ ಹಾವಳಿ

ನಾಝಿಗಳು ಜರ್ಮನಿಯಲ್ಲಿ ಅಧಿಕಾರ ಪಡೆದು ಆಕ್ರಮಣಕಾರಿ ಯುದ್ಧಕ್ಕೆ ಸಿದ್ಧತೆಗಳನ್ನು ನಡೆಸುತ್ತಿದ್ದ ಸಮಯದಲ್ಲೇ ಈ ಕಾಂಗ್ರೆಸ್ ಸಮಾವೇಶಗೊಂಡಿತ್ತು. ಯುದ್ಧದ ಈ ಪಿಡುಗು ಇಡೀ ಯೂರೋಪನ್ನೇ ಆವರಿಸುತಿತ್ತು. ಬ್ರಿಟನ್ ಮತ್ತು ಫ್ರಾನ್ಸಿನ ಆಳುವ ವರ್ಗ ಸೋವಿಯತ್ ಯೂನಿಯನ್ ವಿರುದ್ಧ ದಂಡೆತ್ತಿ ಹೋಗುವಂತೆ ಹಿಟ್ಲರನನ್ನು ಪ್ರೇರೇಪಿಸುತ್ತಿದ್ದವು. ಫ್ಯಾಸಿಸ್ಟ್ ಶಕ್ತಿಗಳ ಈ ಮುನ್ನಡೆಯನ್ನು ಯೂರೋಪಿನ ಐಕ್ಯ ಕಾರ್ಮಿಕ ವರ್ಗವು ತಡೆಗಟ್ಟಬಹುದಾಗಿತ್ತು. ಆದರೆ ಬಲಪಂಥೀಯ ಮತ್ತು ಸುಧಾರಣಾವಾದಿಗಳ ನೇತೃತ್ವದಲ್ಲಿದ್ದ ಕಾರ್ಮಿಕರ ಗಮನವು ಫ್ಯಾಸಿಸ್ಟ್ ವಿರೋಧಿ ಹೋರಾಟದಿಂದ ವಿಮುಖವಾಗಿತ್ತು.

ಆರನೇ ಕಾಂಗ್ರೆಸಿನಲ್ಲಿ ಕೈಗೊಂಡಿದ್ದ ಹಲವಾರು ತಪ್ಪು ನೀತಿಗಳು ಕಮ್ಯುನಿಸ್ಟರು ತಮ್ಮ ಎಲ್ಲ ಶಕ್ತಿಯನ್ನು ಕ್ರೋಢೀಕರಿಸಿಕೊಂಡು ಫ್ಯಾಸಿಸ್ಟರ ವಿರುದ್ಧ ಹೋರಾಡಲು ತೊಡಕಾಗಿದ್ದವು. ಆದರೆ ದಿಮಿತ್ರೋವ್ ನೇತೃತ್ವದ ಏಳನೇ ಕಾಂಗ್ರೆಸಿನಲ್ಲಿ ಹಿಂದಿನ ಎಲ್ಲ ತಪ್ಪು ನೀತಿಗಳನ್ನು ಸರಿಪಡಿಸಿಕೊಂಡ ಪರಿಣಾಮವಾಗಿ ಯುರೋಪಿನ ಹಾಗೂ ವಸಾಹತು ರಾಷ್ಟ್ರಗಳಲ್ಲಿ ಕಾರ್ಮಿಕ ವರ್ಗದ ಶಕ್ತಿಯನ್ನು ಕ್ರೋಢೀಕರಿಸಿಕೊಂಡು ಫ್ಯಾಸಿಸ್ಟ್ ಮತ್ತು ಸಾಮ್ರಾಜ್ಯಷಾಹಿ ವಿರುದ್ಧ ಹೋರಾಡಲು ಸಾಧ್ಯವಾಯಿತು.

ಐತಿಹಾಸಿಕ ವಿಜಯ

ಈ ನೀತಿಯ ಐತಿಹಾಸಿಕ ವಿಜಯವನ್ನು ಎರಡನೇ ಮಹಾಯುದ್ಧಾನಂತರದಲ್ಲಿ ಕಾಣಬಹುದು. ಕೆಂಪು ಸೇನೆಯ ಕೈಯಲ್ಲಿ ಹಿಟ್ಲರನ ಫ್ಯಾಸಿಸ್ಟ್ ಶಕ್ತಿಗಳು ನಿರ್ನಾಮಗೊಂಡು ಜಗತ್ತಿನ ಮೂರನೇ ಒಂದು ಭಾಗ ಸಮಾಜವಾದದತ್ತ ವಾಲಿತು. ಸಮಾಜವಾದಿ ಬಣಶ ಉದಯದೊಂದಿಗೆ ಜಾಗತಿಕ ಶಕ್ತಿ ಸಮತೋಲನದಲ್ಲಿ ಬದಲಾವಣೆಯಾಗಿ ಹಳೆಯ ವಸಾಹತುಶಾಹಿ ಪದ್ಧತಿ ಕುಸಿಯತೊಡಗಿತು.

ಅನೇಕರ ಮನಸ್ಸಿನಲ್ಲಿ ಫ್ಯಾಸಿಸ್ಟ್ ವಿರೋಧಿ ಹೋರಾಟ ಮತ್ತು ಸಮಾಜವಾದಿ ಕ್ರಾಂತಿಗಾಗಿ ಹೋರಾಟ ಸಂಭಂಧಗಳ ಬಗ್ಗೆ ಮತ್ತು ಫ್ಯಾಸಿಸಂನ ಗುಣಲಕ್ಷಣಗಳ ಬಗ್ಗೆ ಗೊಂದಲವಿದೆ. ಫ್ಯಾಸಿಸಂ ಕಾರ್ಮಿಕ ವರ್ಗ ಮತ್ತು ಬೂರ್ಜ್ವಾಸಿ ವರ್ಗಗಳನ್ನು ಮೀರಿ ನಿಂತ 'ರಾಜ್ಯಶಕ್ತಿ' ಯೆಂದು ಸುಧಾರಣಾವಾದಿಗಳು ಹಾಡತೊಡಗಿದ್ದರು. ಪೆಟ್ಟಿ ಬೂರ್ಜ್ವಾಸಿಗಳು ಬಂಡಾಯವೆದ್ದು ರಾಜ್ಯ ಯಂತ್ರ ಶಕ್ತಿಯನ್ನು ತಮ್ಮ ಕೈಗೆ ತೆಗೆದುಕೊಂಡಿರುವುದನ್ನು ಬ್ರಿಟನ್ ಕಾರ್ಮಿಕ ನಾಯಕ ಬ್ರೈಲ್ಸಿ ಪೋರ್ಡ್ ಫ್ಯಾಸಿಸಂನಲ್ಲಿ ಕಂಡರು. ತಪ್ಪು ದಾರಿಗೆಳೆಯುವ ಇಂತಹ ಎಲ್ಲ ವಾದಗಳನ್ನು ದಿಮಿತ್ರೋವ್ ತಳ್ಳಿ ಹಾಕಿದರು. ಫ್ಯಾಸಿಸಂ ಅಧಿಕಾರಕ್ಕೆ ಬರುವುದೆಂದರೆ ಒಂದು ಬೂರ್ಜ್ವಾ ಸರ್ಕಾರ ಹೋಗಿ ಇನ್ನೊಂದು ಬರುವುದೆಂದಲ್ಲ; ಅದೆಂದರೆ ಒಂದು ವರ್ಗದ ಅಧಿಪತ್ಯದ ಬೂರ್ಜ್ವಾ ಪ್ರಜಾಪ್ರಭುತ್ವದ ಮಾದರಿಗೆ ಬದಲಿಯಾಗಿ ಬಹಿರಂಗ ಭಯೋತ್ಪಾದಕ ಸರ್ವಾಧಿಕಾರದ ಆಗಮನ. ಈ ಮೂಲಭೂತ ವ್ಯತ್ಯಾಸವನ್ನು ಗೌಣವನ್ನಾಗಿ ಕಾಣುವುದೆಂದರೆ ಕ್ರಾಂತಿಕಾರಿ ಕಾರ್ಮಿಕ ವರ್ಗವು ಫ್ಯಾಸಿಸ್ಟರ ವಿರುದ್ಧ ವ್ಯಾಪಕವಾಗಿ ದುಡಿಯುವ ಜನ ಸಮುದಾಯವನ್ನು ಒಟ್ಟು ಮಾಡುವ ಮತ್ತು ಬೂರ್ಜ್ವಾ ಬಣದಲ್ಲಿ ಇರುವ ಆಂತರಿಕ ವೈರುಧ್ಯಗಳ ಪ್ರಯೋಜನ ಪಡೆಯಲು ನಿರಾಕರಿಸುವಂತಾಗುತ್ತದೆ. ಇಂತಹ ತಿಳುವಳಿಕೆಯಿಂದಾಗಿಯೇ ಫ್ರಾನ್ಸ್‌ನಲ್ಲಿ ಫ್ಯಾಸಿಸ್ಟ್ ಶಕ್ತಿಗಳು ಅಧಿಕಾರಕ್ಕೆ ಬರದಂತೆ ತಡೆಯಲು ಮತ್ತು ಸ್ಪೈಯಿನ್‌ನಲ್ಲಿ ಫ್ರಾಂಕೋನ್ ವಿರುದ್ಧ ಉಗ್ರ ಹೋರಾಟ ನಡೆಸಲು ಸಾಧ್ಯವಾಯಿತು.

ನಮ್ಮ ಅನುಭವ

ಅಧಿಕಾರಶಾಹಿಯ ಅಪಾಯವನ್ನೆದುರಿಸುತ್ತಿರುವ ನಮ್ಮ ದೇಶ ದಿಮಿತ್ರೋವ್ ಮಾತುಗಳಿಂದ ಬಹಳಷ್ಟು ಕಲಿಯುವುದಿದೆ. ಇಲ್ಲಿ ಬೂರ್ಜ್ವಾ ವಿರೋಧ ಪಕ್ಷಗಳು ಮತ್ತು ಪ್ರಜಾಪ್ರಭುತ್ವ ವಿಭಾಗಗಳು ತುರ್ತು ಪರಿಸ್ಥಿತಿಯ ಆಳ್ವಿಕೆಯ ವಿರೋಧವಾಗಿ ನಿಂತಿದ್ದರಿಂದ, ಅದರ ವಿರುದ್ಧ ವ್ಯಾಪಕವಾದ ತಡೆಯನ್ನೊಡ್ಡಲು ಸಾಧ್ಯವಾಯಿತು. 1977ರಲ್ಲಿ ಜನತೆಯಿಂದ ದೂರವಾದ ಅಧಿಕಾರಶಾಹಿ ಪಕ್ಷ ಚುನಾವಣೆಯಲ್ಲಿ ಸಂಪೂರ್ಣವಾಗಿ ಸೋತಿತು. ಬೂರ್ಜ್ವಾ ಪಕ್ಷಗಳಲ್ಲಿನ ವೈರುದ್ಯಗಳನ್ನು ಎತ್ತಿ ತೋರುತ್ತಾ ದಿಮಿತ್ರೋವ್ ಹೇಳಿದರು: "ವಾಸ್ತವದಲ್ಲಿ ಬೂರ್ಜ್ವಾ ಪಕ್ಷಗಳ ಪರಸ್ಪರ ಸಹಕಾರದೊಂದಿಗೆ ಮತ್ತೆ ಕೆಲವೊಮ್ಮೆ ಹಳೆಯ ಬೂರ್ಜ್ವಾ ಪಕ್ಷಗಳ ವಿರುದ್ಧದ ತೀವ್ರ ಹೋರಾಟದೊಂದಿಗೆ ಫ್ಯಾಸಿಸಂ ಅಧಿಕಾರಕ್ಕೆ ಬರುತ್ತದೆ." ತುರ್ತು ಪರಿಸ್ಥಿತಿ ಆಳ್ವಿಕೆಗೆ ಸಂಭಂದಿಸಿದಂತೆ ಇದೇ ನಮ್ಮ ಅನುಭವವಾಗಿದೆ.

ಫ್ಯಾಸಿಸ್ಟ್ ವಿರೋಧಿ ಹೋರಾಟವು ಮುಂದಿಡುವ ಪ್ರಶ್ನೆಯೆಂದರೆ— ಬೂರ್ಜ್ವಾ ಪ್ರಜಾಪ್ರಭುತ್ವ ಕುರಿತಂತೆ ನಾವು ತಳೆಯಬೇಕಾದ ಧೋರಣೆ. ಅಧಿಕಾರಶಾಹಿಯ ವಿರುದ್ಧ ಮೂರ್ತ ಹೋರಾಟಕ್ಕೆ ಮಹತ್ವ ನೀಡದ ಅನೇಕ ತೀವ್ರವಾದಿಗಳು ನಮ್ಮಲ್ಲಿದ್ದಾರೆ. ಐದು ದಶಕಗಳ ಹಿಂದೆ ಯೂರೋಪಿನಲ್ಲಿ



ಜಾರ್ಜಿ ದಿಮಿತ್ರೋವ್

ಫ್ಯಾಸಿಸಂಗೆ ಸಹಾಯ ಮಾಡಿದಂತೆ ಈ ಶಕ್ತಿಗಳು ಕ್ರಾಂತಿಗಾಗಿ ಹೋರಾಟದ ನೆಪದಲ್ಲಿ ಪ್ರಜಾಪ್ರಭುತ್ವಕ್ಕಾಗಿನ ಹೋರಾಟವನ್ನು ತೊರೆದು ಅಧಿಕಾರಶಾಹಿ ಶಕ್ತಿಗಳಿಗೆ ಸಹಾಯ ಮಾಡುತ್ತಿದ್ದಾರೆ.

ಟ್ರಾಟ್‌ಸ್ಕಿಗಳಿಗೆ ಉತ್ತರ

ದಿಮಿತ್ರೋವ್ ತನ್ನ ಕಾಲದ ಟ್ರಾಟ್‌ಸ್ಕಿಗಳಿಗೆ ಉತ್ತರಿಸಿದರು: "ಇಂದು ಬಂಡವಾಳಶಾಹಿಯ ಅಡಿಯಲ್ಲಿ ಬದುಕುತ್ತಿರುವ ಮಿಲಿಯಾಂತರ ದುಡಿಯುವ ಜನತೆಯ ಮುಂದೆ ವಿವಿಧ ದೇಶಗಳ ಬೂರ್ಜ್ವಾಸಿ ಆಡಳಿತದ 'ಮಾದರಿ'ಗಳನ್ನು ಕುರಿತಂತೆ ತನ್ನ ಧೋರಣೆಯನ್ನು ನಿರ್ಧರಿಸುವ ಪ್ರಶ್ನೆ ಅನಿವಾರ್ಯವಾಗಿದೆ. ನಾವು ಅರಾಜಕತೆವಾದಿಗಳಲ್ಲ ಮತ್ತು ಯಾವುದೇ ನಿರ್ದಿಷ್ಟ ದೇಶದಲ್ಲಿ ಯಾವ ರೀತಿಯ ರಾಜಕೀಯ ಆಳ್ವಿಕೆಯಲ್ಲಿದೆ ಎನ್ನುವುದು ನಮಗೆ ಉಪೇಕ್ಷೆಯ ವಿಷಯವೂ ಅಲ್ಲ; ಹಾಗೆಯೇ ಬೂರ್ಜ್ವಾ ಸರ್ವಾಧಿಕಾರವು ಪ್ರಜಾಪ್ರಭುತ್ವ ಹಕ್ಕುಗಳನ್ನು ತೀವ್ರವಾಗಿ ನಿರಾಕರಿಸಿದ ಪ್ರಜಾಪ್ರಭುತ್ವದ ರೂಪದಲ್ಲಿದಿಯೇ ಅಥವಾ ಬಹಿರಂಗ ಫ್ಯಾಸಿಸ್ಟ್ ರೂಪದಲ್ಲಿದೆಯೇ ಎನ್ನುವುದು ಗೌಣವಾದ ಪ್ರಶ್ನೆಯಲ್ಲ. ತೀವ್ರತರ ಹೋರಾಟದ ಫಲವಾಗಿ ಕಾರ್ಮಿಕ ವರ್ಗ ಪಡೆದ ಪ್ರತಿಯೊಂದು ಹಕ್ಕುಗಳನ್ನು ರಕ್ಷಿಸುತ್ತಾ ಈ ಅನುಕೂಲಗಳನ್ನು ವಿಸ್ತರಿಸಲು ನಾವು ಹೋರಾಡುತ್ತೇವೆ. ಕೇವಲ ಘಟಿಂಗರು ಮಾತ್ರ ಜನತೆಯ ಹಕ್ಕುಗಳನ್ನು ರಕ್ಷಿಸುವ ಹೋರಾಟವನ್ನು ನಿರಾಕರಿಸುತ್ತಾರೆ."

ಆದ್ದರಿಂದಲೇ ನಮ್ಮ ದೇಶದ ಪ್ರಜಾಪ್ರಭುತ್ವ ಶಕ್ತಿಗಳು ಜನತೆಯ ಹಕ್ಕುಗಳನ್ನು ಮೊಟಕುಗೊಳಿಸುವ N.S.A., E.S.M.A. ಅಥವಾ ನ್ಯಾಯಾಂಗವನ್ನು ಕಾರ್ಯಾಂಗಕ್ಕೆ ಅಧೀನಗೊಳಿಸುವ ಪ್ರಯತ್ನಗಳನ್ನು ಪ್ರತಿಭಟಿಸುತ್ತಿವೆ. ಅಧ್ಯಕ್ಷ ಮಾದರಿ ಸರ್ಕಾರ ಸ್ಥಾಪಿಸುವ ಅಧಿಕಾರಶಾಹಿ ಮುನ್ನಡೆಯ ಭಾಗವಾಗಿ ಹರಿಯಾನದಲ್ಲಿ ಕಾಂಗ್ರೆಸ್ (ಐ) ಸರ್ಕಾರವನ್ನು ಸ್ಥಾಪಿಸಿರುವುದನ್ನು ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳು ವಿರೋಧಿಸಿವೆ.

ಯೂರೋಪಿನಲ್ಲಿ ಫ್ಯಾಸಿಸಂನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಲು ದುಡಿಯುವ ವರ್ಗದ ಐಕ್ಯತೆ ಅನಿವಾರ್ಯವಾಗಿತ್ತು. ಈ ನಿಟ್ಟಿನಲ್ಲಿ ವ್ಯಾಪಕ ಜನತಾ ರಂಗವನ್ನು ರೂಪಿಸಲು ದಿಮಿತ್ರೋವ್ ಕಮ್ಯುನಿಸ್ಟರಿಗೆ ಕರೆ ನೀಡಿದರು. ಆದರೆ ಸೋಷಿಯಲ್ ಡೆಮಾಕ್ರಟಿಕ್ ನಾಯಕರುಗಳೊಂದಿಗೆ ತತ್ವರಹಿತವಾದ ಮತ್ತು ಅವಕಾಶವಾದದಿಂದ ಕೂಡಿದ ಯಾವುದೇ ಒಪ್ಪಂದಕ್ಕೆ ವಿರೋಧ ವ್ಯಕ್ತಪಡಿಸಿದರು ಜೊತೆಗೆ ಈ ನಾಯಕರುಗಳ ಹಿಂದಿರುವ ಜನತೆಯ ಬಗ್ಗೆ ಆದರಣೀಯವಾದ ಮನೋಭಾವವನ್ನು ಹೊಂದಿರಲು ಕಮ್ಯುನಿಸ್ಟರಿಗೆ ಹೇಳಲು ಮರೆಯಲಿಲ್ಲ.

ಹೋರಾಟ ಆಧರಿಸಿದ ಐಕ್ಯತೆ

ವರ್ಗ ಹೋರಾಟ, ಬಂಡವಾಳ ಹಾಗೂ ಫ್ಯಾಸಿಸ್ಟ್ ವಿರುದ್ಧ ಐಕ್ಯ ಹೋರಾಟಗಳನ್ನಾಧರಿಸಿದ ಮತ್ತು ಕಾರ್ಮಿಕ ಸಂಘಟನೆಯಲ್ಲಿ ಆಂತರಿಕ ಪ್ರಜಾಪ್ರಭುತ್ವ ಅನುಸರಿಸುವ ಸಂಯುಕ್ತ ಕಾರ್ಮಿಕ ಸಂಘಟನೆಗೆ ದಿಮಿತ್ರೋವ್ ಕರೆ ನೀಡಿದರು. ಕಾರ್ಮಿಕ ಸಂಘಗಳಲ್ಲಿ ಆಂತರಿಕ ಪ್ರಜಾಪ್ರಭುತ್ವದ ಬಗ್ಗೆ ಒತ್ತಿ ಹೇಳಿದ್ದಾರೆ. ತತ್ವಬದ್ಧವಾದ ಮತ್ತು ವರ್ಗ ಸಹಯೋಗ ರಹಿತವಾದ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ ರೂಪುಗೊಳ್ಳುವಂತೆ ಪ್ರಯತ್ನಿಸಲು ಕಮ್ಯುನಿಸ್ಟ್ ಪಕ್ಷಗಳು ಎಲ್ಲ ಪ್ರಯತ್ನ ಕೈಗೊಳ್ಳಬೇಕೆಂದಿದ್ದಾರೆ.

ಕಾರ್ಮಿಕ ವರ್ಗದ ಸರ್ವಾಧಿಕಾರ

ಯೂರೋಪ್ ಮತ್ತು ಯೂರೋಪೇತರ ದೇಶಗಳಲ್ಲಿನ ಇಂದಿನ ಎಲ್ಲ ಸುಧಾರಣಾವಾದಿಗಳು ದಿಮಿತ್ರೋವ್ ಒತ್ತುಕೊಟ್ಟ ಕಾರ್ಮಿಕ ವರ್ಗದ ಸರ್ವಾಧಿಕಾರವನ್ನು ಗುರುತಿಸಲು ಮತ್ತು ಬೂರ್ಜ್ವಾ ಆಡಳಿತವನ್ನು ವಿಪ್ಲವ ಮಾರ್ಗದಲ್ಲಿ ಕಿತ್ತೊಗೆಯಲು ಹಿಂಜರಿಯುತ್ತಿದ್ದಾರೆ

ಜಾಗತಿಕ ಕಮ್ಯುನಿಸ್ಟ್ ಚಳುವಳಿಯನ್ನು ಮಾರ್ಗದರ್ಶಿಸುವಲ್ಲಿನ ದಿಮಿತ್ರೋವ್‌ರವರ ಯಶಸ್ಸನ್ನು ಅಂತರರಾಷ್ಟ್ರೀಯತೆಯ ಬಗ್ಗೆ ಅವರಿಗಿದ್ದ ಆಳವಾದ ಮತ್ತು ಜೀವಂತವಾದ ಬದ್ಧತೆಯನ್ನು ಬಿಟ್ಟು ಯೋಚಿಸುವಂತಿಲ್ಲ. ಅವರು ತಮ್ಮ ತಾರುಣ್ಯದಲ್ಲೇ ಮಾರ್ಕ್ಸ್‌ನ ಅಂತರರಾಷ್ಟ್ರೀಯತೆಯನ್ನು ರಕ್ತಗತ ಮಾಡಿಕೊಂಡಿದ್ದರು. ದಿಮಿತ್ರೋವ್‌ರವರು ನಮ್ಮ ಕಾಲದ ಮಹಾನ್ ಅಂತರಾಷ್ಟ್ರೀಯತಾವಾದಿಯಾಗಿದ್ದರು. ತಮ್ಮ ಜೀವಮಾನವಿಡೀ ಲೆನಿನ್‌ರ ವಿಚಾರವಾದ "ಅಂತರರಾಷ್ಟ್ರೀಯ ಮಟ್ಟದ ಅವಿಚ್ಛಿನ್ನ ವರ್ಗ ಹೋರಾಟವನ್ನು" ಎತ್ತಿ ಹಿಡಿದರು. ಕಾರ್ಮಿಕ ಅಂತರರಾಷ್ಟ್ರೀಯತೆಯು ಯಾವುದೇ ವೈಯಕ್ತಿಕ ರಾಷ್ಟ್ರದ ಕಾರ್ಮಿಕರ ಸಾಮಾಜಿಕ, ರಾಷ್ಟ್ರೀಯ, ಸಾಂಸ್ಕೃತಿಕ ಹೋರಾಟಗಳಿಗೆ ಅಡ್ಡಿ ಬರದೆ ವಾಸ್ತವದಲ್ಲಿ ಅದರ ಯಶಸ್ಸಿಗೆ ಸಹಕರಿಸುತ್ತದೆಂದರು.

ಐತಿಹಾಸಿಕ ಹೊಣೆ

ಅಮೆರಿಕನ್ ಸಾಮ್ರಾಜ್ಯಶಾಹಿಗಳು ಜಾಗತಿಕ ಪರಮಾಣು ಅನಾಹುತಕ್ಕೆ ಮತ್ತು ಸೋವಿಯತ್ ಯೂನಿಯನ್ ಅಸ್ತಿತ್ವಕ್ಕೆ ಬೆದರಿಕೆಯನ್ನೊಡ್ಡುತ್ತಿರುವ ಈ ಸಮಯದಲ್ಲಿ ದಿಮಿತ್ರೋವ್ ಏಳನೇ ಕಾಂಗ್ರೆಸಿನಲ್ಲಿ ಹೇಳಿದ ಮಾತುಗಳು, ಈ ಬೆದರಿಕೆಯನ್ನು ಎಲ್ಲ ರಾಷ್ಟ್ರಗಳೂ ಐಕ್ಯತೆಯಿಂದ ಎದುರಿಸುವಂತೆ ಪ್ರೇರೇಪಿಸುತ್ತವೆ. ಫ್ಯಾಸಿಸ್ಟ್ ಪೈಶಾಚಿಕ ಶಕ್ತಿಗಳಿಂದ ಮತ್ತು ಸಾಮ್ರಾಜ್ಯಶಾಹಿಗಳ ದಾಳಿಯ ಭೀಕರತೆಯಿಂದ ಮಾನವ ಕುಲವನ್ನು ಸಂರಕ್ಷಿಸುವ ಐತಿಹಾಸಿಕ ಹೊಣೆ ಕಾರ್ಮಿಕ ಅಂತರರಾಷ್ಟ್ರೀಯತೆಯ ಮೇಲಿದೆ.

(7ನೇ ಪುಟ ನೋಡಿ)

ಕರ್ನಾಟಕ ರಾಜ್ಯದಲ್ಲಿ

ಮಠಾಧೀಶರ ಫರ್ಮಾನ್

—ಎನ್ಕೆ

"ಬ್ರಹ್ಮ ಸತ್ಯ ಜಗನ್‌ಮಿಥ್ಯ"ವೆಂದು ತಮ್ಮ ಶಿಷ್ಯ ವೃಂದಕ್ಕೆ ರಾತ್ರಿ ಹಗಲು ಬೋಧಿಸುತ್ತ ಕಲ್ಪನಾ ಲೋಕದಲ್ಲಿ ತೇಲಾಡುತ್ತಿರುವ ಮಠಾಧಿಪತಿಗಳನ್ನೆಲ್ಲ ಗೋಕಾಕ್ ವರದಿ ಬಡಿದೆಬ್ಬಿಸಿದೆ. ಬ್ರಹ್ಮ–ದೇವರು ಒಬ್ಬನೇ ಸತ್ಯ. ನಮಗೆ ಕಾಣುವ ಜಗತ್ತು, ಜೀವಿಗಳು, ಮನೆ, ಸಂಸಾರ, ಹೆಂಡರು, ಮಕ್ಕಳು ಎಲ್ಲ ಮಿಥ್ಯ, ನಾಶವಾಗುವಂಥವುಗಳು. ಬ್ರಹ್ಮ ಒಬ್ಬನನ್ನೇ ನಂಬು, ಜಗತ್ತು, ಪ್ರಾಣಿ, ಸಂಸಾರ, ಹೆಂಡರು, ಮಕ್ಕಳನ್ನೆಲ್ಲ ಮರೆತು ಬಿಡು—ಇದೇ ಉಪದೇಶ. ಯಾರಿಗಿದ್ದು ಉಪದೇಶ ? ಕಾರ್ಖಾನೆ, ಭೂಮಿ, ಉದ್ಯೋಗ ಹೆಂಡತಿ, ಮಕ್ಕಳು ಇರುವವರಿಗೆ. ಲಗ್ನ ಆಗಿ ಸಂಸಾರ ನಡೆಸಲಿರುವ ಹುಡುಗ–ಹುಡುಗಿಯರಿಗೆ:

ಇಂಥ ಬೋಧನೆ ಮಾಡುವ ಮಠಾಧೀಶರನ್ನೆಲ್ಲ ಗೋಕಾಕ್ ವರದಿ ತಿರುವು ಮುರುವು ಮಾಡಿದೆ. ಬ್ರಹ್ಮನ ಸ್ಥಾನವನ್ನು ಕನ್ನಡ ಪಡೆದು ಜಗತ್ತಿನ ಸ್ಥಾನದಲ್ಲಿ ಕನ್ನಡೇತರ ಭಾಷೆಗಳು ಕುಳಿ ಹೋಗುವಂತಾಗಿದೆ.

ಗೋಕಾಕ್ ವರದಿ ಶಿಫಾರಸು ಮಾಡಿರುವಂತೆ ರಾಜ್ಯದಲ್ಲಿ ಕನ್ನಡವನ್ನು ಕಡ್ಡಾಯದ ಏಕೈಕ ಪ್ರಥಮ ಭಾಷೆಯನ್ನಾಗಿ ಜಾರಿಗೆ ತರಬೇಕು ಎಂದು ಜೂನ್ 3 ರಂದು ಬೆಂಗಳೂರಿನಲ್ಲಿ ಸೇರಿದ್ದ ಕರ್ನಾಟಕ ಮಠಾಧೀಶರ ಸಭೆ ಸರ್ವಾನುಮತದಿಂದ ಗೊತ್ತುವಳಿ ಅಂಗೀಕರಿಸಿದೆ. ಮಠಾಧೀಶರ ಈ ನಿರ್ಣಯ ಅವರನ್ನೆಲ್ಲ ಮಾರ್ಕ್ಸ್‌ವಾದಿ ಗುಂಪಿಗೆ ಸೇರಿಸಿದಂತಾಗಿದೆಂದು ಹಲವಾರು ಜನ ನನಗೆ ಹೇಳಿದ್ದುಂಟು. ಕನ್ನಡ ಏಕೈಕ ಪ್ರಥಮ ಭಾಷೆಯಾಗಬೇಕೆಂದು ಹೇಳುವುದೆಂದರೆ ಜಗತ್ತು ಸತ್ಯವೆಂದು ನಂಬಬೇಕಾಗುತ್ತದೆಂದು ಅವರ ವಾದ. ಜಗತ್ತು ಮಿಥ್ಯವಾದರೆ ಭಾಷೆಯೂ ಮಿಥ್ಯವಾಗಬೇಕು; ಯಾವ ಭಾಷೆಗೆ ಎಷ್ಟು ಅಂಕಗಳಾದರೇನಂತೆ. ಎಲ್ಲ ಮಿಥ್ಯ. ಸ್ವಾಮಿಗಳೆಲ್ಲ ಇಂಥ ವಿಷಯದಲ್ಲಿ ತಲೆ ಹಾಕುವುದು ಸರಿಯಲ್ಲೆಂದು ಕೆಲವು ಸ್ವಾಮಿ ಶಿಷ್ಯರ ವಾದ. ಅಂತೂ 13 ಮಠಾಧೀಶರ ಫರ್ಮಾನ್ ಹೊರಬಿದ್ದಿದೆ. ಗುಂಡೆದೆಯ ಗುಂಡೂರಾಯರಿಗೆ ಮಾತ್ರ ಸ್ವಾಮಿಗಳ ಫರ್ಮಾನ್‌ನಿಂದ ಎದೆ ನಡುಕ ಉಂಟಾದಂತೆ ಕಂಡು ಬರಲಿಲ್ಲ. ಗದಗಿನ ತೋಂಟದಾಚಾರ್ಯರು ಬುದ್ಧಿವಂತಿಕೆ ತೋರಿಸಿದರು. ಗೋಕಾಕ್ ವರದಿ ಪರ ಚಳುವಳಿಗೆ ಬೆಂಬಲಕೊಡುವುದಷ್ಟೇ ನಮ್ಮ ಕರ್ತವ್ಯವಾಗಿದಲ್ಲದೆ, ಗೋಕಾಕ್ ವರದಿ ಕುರಿತು ಅಭಿಪ್ರಾಯ ವ್ಯಕ್ತ ಮಾಡುವುದು, ಸ್ವತಃ ಚಳುವಳಿ ಹೂಡುವುದು ಸ್ವಾಮಿಗಳ ಕೆಲಸವಲ್ಲೆಂದು ಹೇಳಿ, ಸ್ವಾಮಿಗಳ ಸಮ್ಮೇಳನಕ್ಕೆ ಹೋಗಲಿಲ್ಲ. ಗೋಕಾಕ್ ವರದಿ ಕುರಿತು ತಮ್ಮ ಅಭಿಪ್ರಾಯವನ್ನು 3 ಸಲ ಬದಲಾಯಿಸಿದ ಪೇಜಾವರ ಸ್ವಾಮಿಯವರು ಈ ಸಭೆ ಕರೆದಿದ್ದರು.

ಸ್ವಾಮಿಗಳಿಗೂ, ಕನ್ನಡ ಕ್ರಿಯಾ ಸಮಿತಿಯವರಿಗೂ ಗಂಡುಗಲಿ ಗುಂಡೂರಾಯರು "ಸರ್ವೇಜನಾಃ ಸುಖಿನೋ ಭವಂತು" ಎಂಬ ಮಹಾ ಮಂತ್ರೋಪದೇಶ ಮಾಡಿ ತಾನು ಎಲ್ಲರಿಗಿಂತಲೂ ಸೂಪರ್ ಸ್ವಾಮಿ ಎಂಬುದನ್ನು ಸಾಧಿಸಿದ್ದಾರೆ ತನ್ನ ಮಹಾ ಮಂತ್ರೋಪದೇಶ ಪ್ರಾರಂಭವಾಗುತ್ತಿದ್ದಂತೆಯೇ ಕಯ್ಯಾರ ಕಿಂಜಣ್ಣ ರೈಯವರಿಂದ ಬ್ರಹ್ಮಾಸ್ತ್ರ ಬಿಡಿಸಿ ಕನ್ನಡ ಚಳುವಳಿಗಾರರ ಉಗುಳನ್ನು ಕಿರಿನಾಲಿಗೆಯಿಂದೀಚೆಗೆ ಬಾರದಂತೆ ಮಾಡಿದರು. ಮುಖಂಡರು ಪ್ರಚಾರದಿಂದ ಹೆಸರುವಾಸಿಯಾದರು ನಿಜ. ಆದರೆ ಚಳುವಳಿಗಾರರಿಗೇನು ಬಂತು ? ಸರಕಾರಿ ನಿರ್ಣಯ ಕಾದು ನೋಡೋಣ.

ಕೆಂಡಕಾರುವ ರಾಠೋಡರು

ಬೇರಾವ ದಾರಿಯೂ ಕಾಣದ ಒಬ್ಬ ವ್ಯಕ್ತಿ ಅತ್ಯಂತ ನಿರಾಶನಾಗಿ ತನ್ನಲ್ಲಿ ಹುದುಗಿಕೊಂಡಿದ್ದ ಸಿಟ್ಟಿಗೆ, ಭಾವನೆಗಳಿಗೆ ಬಾಯಿಗೆ ಬಂದ ಅತ್ಯಂತ ಹೀನಾಯಮಾನ ಶಬ್ದಗಳಿಂದ ಪ್ರತಿಕ್ರಿಯೆ ವ್ಯಕ್ತ ಮಾಡುತ್ತಿರುತ್ತಾರೆ ಅಥವಾ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಕೆ.ಪಿ.ಸಿ.ಸಿ. (ಐ) ಅಧ್ಯಕ್ಷರಾದ ಕೆ. ಟಿ. ರಾಠೋಡರವರು ಎರಡನೇ ದಾರಿಯನ್ನು ಹಿಡಿಯದೆ, ಮೊದಲನೇ ದಾರಿಯಲ್ಲಿ ಹೊರಟಿದ್ದಾರೆ. ಗೋರ್ಪಡೆಯವರು ಒಮ್ಮತದ ಅಭ್ಯರ್ಥಿಯಾಗಲಾರದವರಾದಾಗ, ಕೆ. ಟಿ. ರಾಠೋಡರಿಗೆ ಕೆ. ಪಿ. ಸಿ. ಸಿ. (ಐ) ಅಧ್ಯಕ್ಷ ಪಟ್ಟ ದೊರೆಯಿತು. ಅಂದಿನಿಂದ ಇಂದಿನವರೆಗೂ ರಾಠೋಡ ಮತ್ತು ಮುಖ್ಯ ಮಂತ್ರಿ ಗುಂಡೂರಾಯರಿಗೆ ಎಣ್ಣೆ ಸೀಗೆಕಾಯಿ ಇದ್ದಂತೆ. ಇಬ್ಬರೂ ಕವಲು ದಾರಿಯಲ್ಲೇ ಹೊರಟಿದ್ದಾರೆ. ಕಮ್ಯುನಿಸ್ಟ್ ಪಾರ್ಟಿಗಳಲ್ಲಷ್ಟೇ ಪಾರ್ಟಿ ಪ್ರಧಾನವಾಗಿದ್ದು ಆಡಳಿತೆಯಲ್ಲಿ ಕಾರ್ಯಾಂಗವನ್ನು ಹಿಡಿತದಲ್ಲಿಟ್ಟುಕೊಳ್ಳುತ್ತದೆ. ಬಂಡವಾಳಶಾಹಿ ಪಕ್ಷಗಳಲ್ಲಿ ವ್ಯಕ್ತಿ ಮತ್ತು ಮುಖ್ಯ ಮಂತ್ರಿಯವರದೇ ಮೇಲುಗೈ. ಪಾರ್ಟಿ ಎಂಬುದು ಬರೀ ಬಾಲಂಗೋಚಿ ಕೆ.ಪಿ.ಸಿ.ಸಿ. (ಐ) ಅಧ್ಯಕ್ಷ ಪ್ರಧಾನವಾಗಿರಬೇಕಾದ್ದು ನ್ಯಾಯ. ಆದರೆ ರಾಠೋಡವರು ಬಾಲಂಗೋಚಿಯಾಗಿಯೇ ಉಳಿದಿರುವುದು ಅವರಿಗೆ ಅಪಮಾನವಾಗಿದೆ. ರಾಠೋಡರು ಅಧ್ಯಕ್ಷರಾದಂದಿನಿಂದಲೂ ಹಂತ ಹಂತದಲ್ಲೂ ರಾಠೋಡ, ಗುಂಡೂರಾಯರೊಳಗಿನ ಭಿನ್ನಾಭಿಪ್ರಾಯ ಪ್ರಕಟವಾಗುತ್ತಲೇ ಬಂದಿತ್ತು. ಈಗಾಗಲೇ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಅದು ಕೊನೆ ಹಂತ ಮುಟ್ಟಿದೆ. ಗುಂಡೂರಾಯರ ಮುಖ್ಯಮಂತ್ರಿ ಕುರ್ಚಿ ಟೀಕೆಗಳ ತೆರೆಯಲ್ಲಿ ತೇಲಾಡುತ್ತಿರುವಾಗಲೇ ಬೀದರ್, ಹೊಸದುರ್ಗ ವಿಧಾನ ಸಭೆ ಚುನಾವಣೆಯ ಫಲಿತಾಂಶ ಗುಂಡೂರಾಯರ ವೈಯಕ್ತಿಕ ಪ್ರತಿಭೆಗೆ ತೂಕ ಹೆಚ್ಚಿಸಿತು. ರಾಠೋಡರ ಅಧ್ಯಕ್ಷ ಸ್ಥಾನವನ್ನು ಗೌಣಗೊಳಿಸಿತು. ರಾಠೋಡರು ಕೆಂಡಕಾರಿದರು. ಮೇ ತಿಂಗಳಲ್ಲಿ ನಡೆದ 4 ರಾಜ್ಯಗಳ ಚುನಾವಣೆಯ ವಿಮರ್ಶೆ ಎ.ಐ.ಸಿ.ಸಿ.ಯಲ್ಲಿ ನಡೆಯಬೇಕು. ಎ.ಐ.ಸಿ.ಸಿ.ಯನ್ನು ಪುನರ್ರಚಿಸಬೇಕು. ಕಾರ್ಯಕಾರಿ ಸಮಿತಿಯಲ್ಲಾದರೂ ಇದು ಚರ್ಚಿಸಲ್ಪಡಬೇಕೆಂದು ಹೇಳಿ ಇಂದಿರಾ ಗಾಂಧಿಯವರ ಏಕೈಕ ಅಧಿಕಾರ ಕೋಟೆಗೆ ಕೈಹಾಕಿದ್ದಾರೆ. ಪಕ್ಷದ ಅಧಿಕಾರ ಬಿಂದುವನ್ನೇ ಎದುರಿಸುವ ಧೈರ್ಯಮಾಡಿದ್ದಾರೆ ರಾಠೋಡರು. ಅವರ ಹೆಜ್ಜೆ ಅಭಿನಂದನಾರ್ಹ. ಅದರ ಜೊತೆಯಲ್ಲೇ ಗುಂಡೂರಾಯರು ಜಾತೀಯವಾದಿಗಳೆಂದೂ, ಹಿಂದುಳಿದವರನ್ನು ನಾಶಮಾಡುತ್ತಿದ್ದಾರೆಂದೂ, ತಮ್ಮ ಜಾತಿಯವರ ಹಿತಸಾಧನೆಯಲ್ಲೇ ಮಗ್ನರಾಗಿದ್ದಾರೆಂಬ ಆರೋಪಹೊರಿಸಿ, ಎತ್ತಿದ ಧ್ವನಿಯಲ್ಲಿ ಘರ್ಜಿಸಿ, ಪತ್ರಿಕೆಗಳು ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸಲೇಬೇಕೆಂದು ಒತ್ತಿ ಹೇಳಿದ್ದಾರೆ ಇದರರ್ಥವೇನು ? ಕೇಂದ್ರವನ್ನೇ ಟೀಕಿಸುವಷ್ಟು ಧೈರ್ಯ ರಾಠೋಡರಿಗೆ ಎಲ್ಲಿಂದ ಬಂತು ? ಗುಂಡೂರಾಯರ ವಿರೋಧಿಗಳು ಕೇಂದ್ರದಲ್ಲಿ ರಾಠೋಡರಿಗೆ ಬೆಂಬಲ ಕೊಡುತ್ತಿದ್ದಾರೆಂದೂ, ತಮ್ಮಿಂದ ಮಾಡಲಾಗದ ಕೆಲಸವನ್ನು ರಾಠೋಡರಿಂದ ಮಾಡಿಸುತ್ತಿದ್ದಾರೆಂದೂ ಕೆಲವರ ಹೇಳಿಕೆ. ತನ್ನ ಅಧಿಕಾರ ಸ್ಥಾನ ಅಭದ್ರವಾಗಿದೆಯೆಂದು ತಿಳಿದೇ, ಹಿಂದುಳಿದ ಜಾತಿಯವರನ್ನು ಕೆರಳಿಸಿ, ಬಂಡು ಹೂಡುವಂತೆ ಮಾಡಿ, ಮುಂಬರುವ ಸಾರ್ವತ್ರಿಕ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ತನ್ನ ಸ್ಥಾನ ಭದ್ರಪಡಿಸಿಕೊಳ್ಳಲು ಈ ರೀತಿ ಕೆಂಡಕಾರುತ್ತಿದ್ದಾರೆಂದೂ ಇನ್ನೊಂದು ಅಭಿಪ್ರಾಯ. ರಾಠೋಡ, ಬಂಗಾರಪ್ಪನಂತವರು ಹಿಂದುಳಿದವರನ್ನು ಅಲಕ್ಷಿಸಲಾಗುತ್ತಿದೆಯೆಂದು ಹೇಳಿ ಬಂಡೆದ್ದು ದೇವರಾಜ ಅರಸರ ಕ್ರಾಂತಿರಂಗ ಸೇರುತ್ತಾರೆಂಬುದೊಂದೂ ದಟ್ಟವಾರ್ತೆ. (ದೇವರಾಜ ಅರಸರ ಆಕಸ್ಮಿಕ ಮರಣದಿಂದ ಈ ವಿಚಾರದ ಹಿನ್ನಡೆಯಾಗಬಹುದು) ಅಂತೂ ರಾಠೋಡರ ಉಚ್ಚಾಟನೆಗೆ ಹೆಚ್ಚು ಕಾಲ ಹಿಡಿಯಲಿಕ್ಕಿಲ್ಲೆಂದು ಬಹಳ ಜನರ ಅನಿಸಿಕೆ.

ಸಿಮೆಂಟ್ ಹಗರಣ

"ಮುಖ್ಯ ಮಂತ್ರಿ ಗುಂಡೂರಾವ್ ಹಾಗೂ ಆಹಾರ ಸಚಿವ ಮಾಣಿಕರಾವ್ ಪಾಟೀಲರನ್ನು ವಿಚಾರಣೆಗಾಗಿ ನ್ಯಾಯಾಲಯಕ್ಕೆ ಕರೆಯಿಸಿ" ಎಂದು ಸಿಮೆಂಟ್ ಹಂಚಿಕೆ ಹಗರಣದ ಬಗ್ಗೆ ದೂರು ನೀಡಿರುವ ಶ್ರೀಮತಿ ನಿರ್ಮಲಾ ಪ್ರಸಾದರ ಪರ ವಕೀಲರು ನ್ಯಾಯಾಧೀಶರ ಮುಂದೆ ವಾದ ಮಂಡಿಸಿದರು. ಕೋರ್ಟಿನೆದುರು ಹಾಜರಾಗಲು ಗುಂಡೂರಾಯರು ಹಿಂಜರಿಯಲಿಕ್ಕಿಲ್ಲ. ಹಾಜರಾದರೂ ಕೂಡ 4000 ಟನ್ ಸಿಮೆಂಟಿನ ಹಗರಣ ಬೆಳಕು ಕಂಡೀತೆ, ತಪ್ಪಿತಸ್ಥರಿಗೆ ಶಿಕ್ಷೆಯಾದೀತೆ ಎಂಬ ಪ್ರಶ್ನೆ ಜನರ ಮುಂದಿದೆ. ಮಹಾ ಮಹಾರಾಷ್ಟ್ರದ ಮುಖ್ಯ ಮಂತ್ರಿ ಅಂತುಳೆಯವರನ್ನೂ ಇದೇ ರೀತಿ ಕೋರ್ಟಿಗೆಳೆಯಲಾಗಿತ್ತು. ಕೋಟ್ಯಾವಧಿ ರೂಪಾಯಿಯ ಹಗರಣ. ಮಹಾರಾಷ್ಟ್ರ ರಾಜ್ಯಾದ್ಯಂತ ಚಳುವಳಿ. ಆಡಳಿತ ಯಂತ್ರ, ಅಧಿಕಾರದ ದುರುಪಯೋಗಕ್ಕಾಗಿ ಕೊನೆಗೆ ಅಂತುಳೆಯವರ ರಾಜೀನಾಮೆ. ಈ ರೀತಿ ಅಪಮಾನಗೊಂಡರೂ ಕೂಡ ಅಂತುಳೆಯವರು ತಮ್ಮವರ ಗುಂಪು ಕಟ್ಟಿ ಮತ್ತೆ ಅಧಿಕಾರ ಪಡೆಯಲು ಗುರ್ ಅನ್ನುತ್ತಿದ್ದಾರೆ. ಮಂತ್ರಿಗಳ ವಿರುದ್ಧ ಖಟ್ಲೆ ಹಾಕಲು ಗವರ್ನರರ ಅಪ್ಪಣೆಬೇಕಂತೆ. ಸಿಮೆಂಟ್ ಹಗರಣದ ವಿರುದ್ಧ ಮಂತ್ರಿಗಳ ವಿರುದ್ಧ ದಾವೆ ಹೂಡಲು ಗವರ್ನರರ ಅಪ್ಪಣೆ ಕೇಳಲಾಗಿದೆ. ಗವರ್ನರ್ ಮೌನ ತಾಳಿದ್ದಾರೆ. ದುಡ್ಡು, ಸಿಮೆಂಟ್ ತಿನ್ನುವ ಮಂತ್ರಿಗಳಾರೂ ಕೋರ್ಟು ಕಟ್ಟೆ ಏರಲು ಸಾಧ್ಯವುದಿಲ್ಲ ಇಂದಿನ ಸಮಾಜದ ಪರಿಸ್ಥಿತಿಯಲ್ಲಿ. ಜನಜಾಗ್ರತಿ, ಚಳುವಳಿಯೊಂದೇ ಇಂಥ ಮಂತ್ರಿಗಳನ್ನು ಮೂಲೆ ಗುಂಪು ಮಾಡಲು ರಾಮಬಾಣ. ರಾಮಬಾಣ ಎಸೆಯಲು ಸಿದ್ಧತೆ ಮಾಡುವುದು ಅತ್ಯಗತ್ಯ. ಆ ಕಾರ್ಯದಲ್ಲಿ ಮುಂದುವರಿಯೋಣ.

ಕಾಂಗ್ರೆಸ್ ಹಣ

"ದೆಹಲಿಗೆ ಹೋಗಬೇಕೆಂದರೆ ಸಚಿವ ಮೊಯ್ಲಿ ಪ್ರಯಾಣದ ಒಂದು ಟಿಕೆಟ್ ಕೊಡಿಸುತ್ತಾರೆ." ಎಂದು ಕೆ.ಪಿ.ಸಿ.ಸಿ. (ಐ) ಅಧ್ಯಕ್ಷ ರಾಠೋಡರು ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ. ಇದರರ್ಥವೇನೆಂದು ನೀವು ಕೇಳಬಹುದು. ಕಾಂಗ್ರೆಸ್ ಸಂಸ್ಥೆ ನಡೆಸುವ ಖರ್ಚು, ಚುನಾವಣೆಯ ಖರ್ಚು ಸರಕಾರಿ ಖಜಾನೆಯಿಂದ ಹಲವಾರು ರೂಪಗಳಲ್ಲಿ ಖರ್ಚು ಮಾಡಲಾಗುತ್ತಿದೆಯೆಂದೂ, ಅಧಿಕಾರಿಗಳು, ಕಂಟ್ರಾಕ್ಟರರು, ಬಂಡವಾಳದಾರರೇ ಹಣ ಸಹಾಯ ಮಾಡುತ್ತಾರೆಂದೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಯಾವಾಗಲೂ ಆರೋಪ ಹೊರಿಸುತ್ತ ಬಂದಿದೆ. ಪಕ್ಷದ ಖರ್ಚಿಗಾಗಿ ಹಣ ಪಡೆಯಲು ಗುಂಡೂರಾವ್, ಮೊಯ್ಲಿ ಮತ್ತಿತರ ಮಂತ್ರಿಗಳನ್ನು ಅವಲಂಬಿಸಬೇಕಾಗಿದೆಂದು ಕೆ. ಟಿ. ರಾಠೋಡರು ಕಣ್ಣೀರು ಸುರಿಸಿದ್ದಾರೆ. ಹಾಗೆಯೇ "ಸದಸ್ಯರಿಂದ ಚಂದಾ ಸ್ವೀಕರಿಸಿ ಸಂಗ್ರಹಿಸಲಾದ ೬ ಲಕ್ಷ ರೂ. ಹಣವನ್ನು ಕೆ.ಪಿ.ಸಿ.ಸಿ. (ಐ) ಕಾರ್ಯದರ್ಶಿ ಇಬ್ರಾಹಿಂ ಹಾಗೂ ಪ್ರೇಮಕುಮಾರ್ ಅವರು ತಮ್ಮ ಸ್ವಂತದ ಅಕೌಂಟ್‌ನಲ್ಲಿ ಇಟ್ಟಿದ್ದಾರೆ" ಎಂದು ಅಧ್ಯಕ್ಷ ರಾಠೋಡರು ಬಹಿರಂಗವಾಗಿ ಆಪಾದಿಸಿದ್ದಾರೆ. ಟೆಲಿಫೋನ್ ಹಾಗೂ ಇತರ ಕಾರ್ಯಗಳಿಗೆ ಆಗಿರುವ ಒಂದು ಲಕ್ಷ ರೂ. ಬಾಕಿ ಹಣ ಪಾವತಿ ಮಾಡಬೇಕಾಗಿದೆಯೆಂದೂ ದೂರಿದ್ದಾರೆ.

ರಾಠೋಡರು ಮಂತ್ರಿಯಾಗಿದ್ದಾಗ ಹೇಗೆ ಹಣ ಕೂಡಿಸಿದ್ದಾರೆಂಬುದನ್ನು ನೆನಸಿ ಅದನ್ನು ಯಾರಲ್ಲಿ ಡಿಪಾಜಿಟ್ ಇಟ್ಟಿದ್ದರೆಂಬುದನ್ನೂ ಬಹಿರಂಗಗೊಳಿಸಿದರೊಳಿತಲ್ಲವೇ ? ಕಾಂಗ್ರೆ ಪಕ್ಷದಲ್ಲಿ ಈ ರೀತಿ ಹಣ ನುಂಗುವ, ಅಪವ್ಯಯಗಳ ಸುಗುಣಗಳಿವೆಂಬುದನ್ನು ಅರಿತು ರಾಠೋಡರು ದೇವರಾಜ ಅರಸರ ಕೈಬಿಟ್ಟು, ಗುಂಡೂರಾಯರ ಲುಂಗಿಯ ಆಶ್ರಯ ಪಡೆದಿರುವುದು ಆಶ್ಚರ್ಯವಲ್ಲವೇ ? ಇಷ್ಟೆಲ್ಲ ಬಹಿರಂಗ ಆರೋಪ ನಡೆಯುತ್ತಿದ್ದರೂ ಗುಂಡೂರಾಯರು ಮೌನವಾಗಿದ್ದಾರಲ್ಲ. ಇದರರ್ಥವೇನು? ಈಗ ರಾಠೋರಿಡಗಿರುವ ದಾರಿ "ರಾಘವೇಂದ್ರ ನೀ ಮೌನವಾದರೆ ನನ್ನ ಗತಿಯೇನು, ನಿನ್ನ ಕರುಣೆಯ ಜ್ಯೋತಿ ಬಾಳು ಬೆಳಗುವ ತನಕ, ಬಿಡೆನು ನಿನ್ನ ಪಾದ ಗುರುವೆ, ಬಿಡೆನು ನಿನ್ನ ಪಾದ", ಎಂಬ ("ನಾ ನಿನ್ನ ಬಿಡಲಾರೆ" ಎಂಬ ಸಿನಿಮಾದ) ಹಾಡನ್ನು ಹಾಡುವ ಗತಿಯೇ ಹೇಗೆಂಬುದನ್ನು ಈಕ್ಷಿಸೋಣವೇ ?

●

ಸಂತಾಪ

ಬೆಳ್ತಂಗಡಿಯ ತಾಲ್ಲೂಕು ಪುರ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿದ್ದ ಕೆ. ರಾಮನಾಯಕ್ ಅವರು 30–5–82 ರಂದು ನಿಧನರಾಗಿದ್ದಾರೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿತೈಷಿಗಳೂ, ಬೆಳ್ತಂಗಡಿ ತಾಲ್ಲೂಕು ರೈತ ಸಂಘದ ಸ್ಥಾಪಕರೂ ಆಗಿದ್ದ ಕೆ. ರಾಮನಾಯಕ್ ಅವರು ನಿಧನ ಹೊಂದಿದ್ದಕ್ಕೆ ಸಿ.ಪಿ.ಐ. (ಎಂ.) ಬೆಳ್ತಂಗಡಿ ತಾಲ್ಲೂಕು ಘಟಕವು ಸಂತಾಪ ವ್ಯಕ್ತಪಡಿಸಿದೆ.

●

ಸಿ. ಪಿ. ಐ. ಮತ್ತು ಸಿ. ಪಿ. ಐ. (ಎಂ.) ರಾಜ್ಯಮಟ್ಟದ ರಾಜಕೀಯ--

ಭಾರತ ಕಮ್ಯೂನಿಸ್ಟ್ ಪಕ್ಷ ಮತ್ತು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಗಳ ಈ ಜಂಟಿ ರಾಜ್ಯ ಮಟ್ಟದ ಸಮಾವೇಶವು ಅಂತರಾಷ್ಟ್ರೀಯ, ರಾಷ್ಟ್ರೀಯ ಹಾಗೂ ರಾಜ್ಯದ ಪರಿಸ್ಥಿತಿಗಳನ್ನು ಪರಿಶೀಲಿಸಿದೆ. ಈ ಪರಿಸ್ಥಿತಿಗಳು ಹೆಚ್ಚು ಹೆಚ್ಚು ತೀವ್ರಗೊಳ್ಳುತ್ತಿವೆಯಾದರೂ, ಅವುಗಳನ್ನು ಸುಧಾರಿಸಲು ಅವಕಾಶಗಳೂ ಇವೆಯೆಂದು ಸಮಾವೇಶ ಅಭಿಪ್ರಾಯ ಪಡುತ್ತದೆ.

ಅಮೇರಿಕನ್ ಸಾಮ್ರಾಜ್ಯಶಾಹಿಯ ದಾಳಿಕೋರ ಮತ್ತು ಯುದ್ಧೋನ್ಮಾದಿ ನೀತಿಗಳಿಂದಾಗಿ ವಿಶ್ವದಲ್ಲಿ ಇಂದು ಶಾಂತಿಯ ಪ್ರಶ್ನೆಯು ಅತಿ ದೊಡ್ಡ ಸ್ವರೂಪ ತಳೆದಿದೆ. ರೀಗನ್‌ರವರು ಅಧಿಕಾರ ವಹಿಸಿಕೊಂಡ ನಂತರ ಅಮೇರಿಕವು ಸೋವಿಯತ್ ಒಕ್ಕೂಟದೊಡನೆ ಬಹಿರಂಗ ಸೆಣಸಾಟದ ನೀತಿಯನ್ನು ಅನುಸರಿಸುತ್ತಿದೆ. 1986ರ ಹೊತ್ತಿಗೆ ರಕ್ಷಣೆಗಾಗಿ 445 ಬಿಲಿಯನ್ ಡಾಲರ್‌ಗಳಷ್ಟು ಅತಿದೊಡ್ಡ ಪ್ರಮಾಣದ ವೆಚ್ಚ ಮಾಡಲು ಅದು ನಿರ್ಧರಿಸಿದೆ ಹಾಗೂ ಅಣ್ವಸ್ತ್ರಸಜ್ಜಿತ ಕ್ಷಿಪಣಿಗಳು ಮತ್ತು ಇತರ ಸಾಮೂಹಿಕ ವಿನಾಶದ ಅಸ್ತ್ರಗಳನ್ನೂ ಒಳಗೊಂಡಂತೆ ಎಲ್ಲಾ ವಿಧದ ಅಸ್ತ್ರಗಳ ಉತ್ಪಾದನೆಯನ್ನು ಹೆಚ್ಚಿಸಿದೆ. ಎಲ್ಲಕ್ಕಿಂತ ಹೆಚ್ಚಾಗಿ, ಜನರನ್ನು ಕೊಂದರೂ ಆಸ್ತಿಪಾಸ್ತಿಗಳನ್ನು ಉಳಿಸುವಂಥ ಪೈಶಾಚಿಕ ಅಸ್ತ್ರವಾದ ನ್ಯೂಟ್ರಾನ್ ಬಾಂಬ್ ತಯಾರಿಸುವ ಮೂಲಕ ಅದು ಮಾನವ ಕುಲವನ್ನೇ ನಾಶಗೊಳಿಸುವ ತನ್ನ ಬಂಡವಾಳಶಾಹಿ ಕೊಲೆಗಡುಕತನವನ್ನು ಪ್ರದರ್ಶಿಸಿದೆ. ಅದೀಗ "ಮಿತ ಅಣ್ವಸ್ತ್ರ ಸಮರ"ದ ಮಾತನಾಡುತ್ತಿದ್ದರೂ ಅದರ ಅರ್ಥ ಅಣುಯುದ್ಧದ ಬೇಗೆಗೆ ವಿಶ್ವವನ್ನು ತಳ್ಳುವುದೇ ಆಗಿದೆ. "ಸೋವಿಯತ್ ಅಪಾಯ" ಮತ್ತು "ಅಂತರಾಷ್ಟ್ರೀಯ ಭಯೋತ್ಪಾದಕತೆ"ಯ ಹೆಸರಿನಲ್ಲಿ ಎಲ್ ಸಾಲ್ವಡಾರ್, ಚಿಲಿಗಳೂ ಸೇರಿದಂತೆ ಏಷ್ಯಾ, ಆಫ್ರಿಕಾ, ಲ್ಯಾಟಿನ್ ಅಮೇರಿಕಗಳಲ್ಲಿ ನಡೆಯುತ್ತಿರುವ ಎಲ್ಲಾ ರಾಷ್ಟ್ರೀಯ ವಿಮೋಚನಾ ಹೋರಾಟಗಳನ್ನೂ ಹತ್ತಿಕ್ಕಿ ಮಿಲಿಟರಿ ಸರ್ವಾಧಿಕಾರಿಗಳು, ಪ್ರತಿಗಾಮಿ ಸರ್ಕಾರಗಳು ಮತ್ತು ಬಹುರಾಷ್ಟ್ರ ಸಂಸ್ಥೆಗಳಿಗೆ ಸಹಾಯಮಾಡಲು ಯತ್ನಿಸಲಾಗುತ್ತಿದೆ. ಸಾಮ್ರಾಜ್ಯಶಾಹಿಯು ಸೋವಿಯತ್ ಒಕ್ಕೂಟದ ವಿರುದ್ಧವೂ ಸಹ ದಾಳಿಗಳನ್ನು ನಡೆಸಲು ಯೋಜಿಸುತ್ತಿದೆ. ಡೀಗೋ ಗಾರ್ಸಿಯಾವನ್ನು ಅಣ್ವಸ್ತ್ರ ನೆಲೆಯನ್ನಾಗಿ ಮಾಡಿ, ಬೆರ್ಬರಾ-ಓಮನ್ ಮತ್ತಿತರೆಡೆಗಳಲ್ಲಿ ಅದೇ ರೀತಿಯ ನೆಲೆಗಳನ್ನು ಸ್ಥಾಪಿಸಿ, ಪಾಕಿಸ್ತಾನಕ್ಕೆ ಎಫ್-16 ಬಾಂಬರ್‌ಗಳನ್ನೂ ಒಳಗೊಂಡಂತೆ 3 ಬಿಲಿಯನ್ ಡಾಲರ್‌ಗಳಷ್ಟು ಶಸ್ತ್ರಾಸ್ತ್ರ ನೆರವು ನೀಡುವ ಮೂಲಕ ಅಮೇರಿಕವು ಈ ಪ್ರದೇಶದಲ್ಲಿ ಸ್ಫೋಟಕ ಪರಿಸ್ಥಿತಿಯನ್ನುಂಟುಮಾಡಿದೆಯಲ್ಲದೆ ಭಾರತದ ಅಖಂಡತೆ, ಸಾರ್ವಭೌಮತ್ವ ಮತ್ತು ಸ್ವಾತಂತ್ರ್ಯಗಳಿಗೇ ಧಕ್ಕೆ ತಂದಿದೆ.

ಚೀನವು ಸಮಾಜವಾದಿ ದೇಶವಾಗಿದ್ದರೂ ಸಹ, ಅದು ಅಮೇರಿಕವು ಪಾಕಿಸ್ತಾನವನ್ನು ಶಸ್ತ್ರ ಸನ್ನದ್ಧಗೊಳಿಸುತ್ತಿರುವುದನ್ನು ಬೆಂಬಲಿಸುತ್ತಿರುವುದು ಹಾಗೂ ನ್ಯೂಟ್ರಾನ್ ಬಾಂಬ್ ಮತ್ತು ನಾಟೋಗಳ ಬಗ್ಗೆ ಅಮೇರಿಕನ್ ಸಾಮ್ರಾಜ್ಯಶಾಹಿಗೆ ಸಹಾಯಕವಾಗುವಂಥ ನೀತಿಗಳನ್ನು ಅನುಸರಿಸುತ್ತಿರುವುದು ದುರದೃಷ್ಟಕರವಾಗಿದೆ. ಚೀನವು ತನ್ನ ನಿಲುವುಗಳನ್ನು ತಿದ್ದಿಕೊಂಡು ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳ ಮುಖ್ಯ ಪ್ರವಾಹಕ್ಕೆ ಸೇರಿದಲ್ಲಿ ನಮಗೆ ಸಂತೋಷವಾಗುತ್ತದೆ.

ಶಾಂತಿ ಮತ್ತು ಸಾಮ್ರಾಜ್ಯಶಾಹಿ ವಿರೋಧದ ಪರವಾಗಿರುವ ಶಕ್ತಿಗಳ ಅಭೂತಪೂರ್ವ ಬೆಳವಣಿಗೆಯು ಸಂತೋಷದಾಯಕ ವಿಷಯವಾಗಿದೆ. ಶಾಂತಿಗಾಗಿ, ನ್ಯೂಟ್ರಾನ್ ಬಾಂಬ್ ಮತ್ತು ರೀಗನ್ ಸರ್ಕಾರದ ನೀತಿಗಳ ವಿರುದ್ಧವಾಗಿ ಅಮೇರಿಕವೂ ಸೇರಿದಂತೆ ಯೂರೋಪಿನ ಅನೇಕ ರಾಜಧಾನಿಗಳಲ್ಲಿ ಹಿಂದೆಂದೂ ಕಾಣದ ಪ್ರದರ್ಶನಗಳು ನಡೆದಿವೆ. ಸೋವಿಯತ್ ಒಕ್ಕೂಟವು ಸತತವಾಗಿ ಮುಂದಿಡುತ್ತಿರುವ ಶಾಂತಿಪರ ಸಲಹೆಗಳು ವಿಶ್ವದ ಜನತೆಯ ನಡುವೆ ದೊಡ್ಡ ಪ್ರತಿಕ್ರಿಯೆ ಉಂಟುಮಾಡಿವೆ. ಇಂಥ ಪರಿಸ್ಥಿತಿಯಲ್ಲಿ ಶಾಂತಿಗಾಗಿ, ಅಸ್ತ್ರ ಪೈಪೋಟಿ, ನ್ಯೂಟ್ರಾನ್ ಬಾಂಬ್ ಮತ್ತು ಅಮೇರಿಕನ್ ಸಾಮ್ರಾಜ್ಯಶಾಹಿ ಹಾಗೂ ಅದರ ಏಜಂಟರುಗಳ ವಿರುದ್ಧವಾಗಿ ನಡೆಯುವ ಹೋರಾಟವು ಪ್ರತಿಯೊಬ್ಬ ಕಮ್ಯೂನಿಸ್ಟರಿಗೂ ಮತ್ತು ವಿಶ್ವದ ಜನತೆಯ ಕ್ಷೇಮವನ್ನು ಬಯಸುವ ಎಲ್ಲರಿಗೂ ಸಹ ಅತಿಪ್ರಮುಖ ವಿಷಯವಾಗಿದೆಯೆಂದು ಈ ಸಮಾವೇಶವು ಒತ್ತಿ ಹೇಳುತ್ತದೆ.

ಇಂದಿರಾಗಾಂಧಿ ಸರ್ಕಾರವು ಅನುಸರಿಸುತ್ತಿರುವ ಗುತ್ತೇದಾರಿಪರ, ಭೂಮಾಲಿಕಪರ ಹಾಗೂ ಬಹುರಾಷ್ಟ್ರ ಸಂಸ್ಥೆಗಳ ಪರವಾಗಿರುವ ನೀತಿಗಳಿಂದಾಗಿ ನಮ್ಮ ದೇಶದ ಪರಿಸ್ಥಿತಿ ವಿಷಮಿಸುತ್ತಿದೆ. ಜೀವನಾವಶ್ಯಕ ವಸ್ತುಗಳ ಬೆಲೆಗಳು ಒಂದೇ ಸಮನೆ ಏರುತ್ತಿದ್ದು, ಜನತೆಯು ತೀವ್ರ ಸಂಕಷ್ಟಗಳಿಗೆ ಗುರಿಯಾಗಿದೆ. ಕೈಗಾರಿಕಾ ಉತ್ಪಾದನೆಯು ಸ್ಥಗಿತಗೊಂಡಿದೆ, ತಲಾ ಆದಾಯ ಕಡಿಮೆಯಾಗಿದೆ ಹಾಗೂ ಹಣದುಬ್ಬರ ಹೆಚ್ಚುತ್ತಿದೆ. ಗುತ್ತೇದಾರಿಗಳು, ಬಹುರಾಷ್ಟ್ರ ಸಂಸ್ಥೆಗಳು, ಕಪ್ಪು ಹಣದ ವ್ಯವಹಾರಸ್ಥರು ಮತ್ತು ಸಗಟು ವ್ಯಾಪಾರಿಗಳಿಗೆ ಹೆಚ್ಚು ಹೆಚ್ಚು ರಿಯಾಯ್ತಿಗಳನ್ನು ಕೊಡಲಾಗುತ್ತಿದೆ. 1980ರ ಕೈಗಾರಿಕಾ ನೀತಿಯ ನಿರ್ಣಯದಲ್ಲಿ ಕಂಡುಬಂದಿರುವಂತೆ ರಾಷ್ಟ್ರೀಯ ಅಂಗೀಕಾರ ಪಡೆದ ನೀತಿಗಳಾದ ಸ್ವಾವಲಂಬಿತ ಆರ್ಥಿಕ ವಿಕಾಸ ಮತ್ತು ಆರ್ಥಿಕತೆಯಲ್ಲಿ ಸಾರ್ವಜನಿಕ ಕ್ಷೇತ್ರಕ್ಕೆ ನಿರ್ಣಾಯಕ ಪಾತ್ರಗಳ ನೀತಿಗಳನ್ನು ಒಂದೊಂದಾಗಿ ಕೈಬಿಡಲಾಗುತ್ತಿದೆ. ಭೂ ಸುಧಾರಣೆಗಳನ್ನು ಕೈಬಿಡಲಾಗಿದೆ ಮತ್ತು ರೈತರ ಬೆಳೆಗಳಿಗೆ ಪ್ರತಿಫಲದಾಯಕ ಬೆಲೆಗಳನ್ನು ನಿರಾಕರಿಸಲಾಗಿದೆ. ಅದೇ ರೀತಿ ಕೃಷಿ ಕಾರ್ಮಿಕರಿಗೆ ಸೂಕ್ತ ವೇತನ ಮತ್ತು ಜೀವನದ ಭದ್ರತೆಯನ್ನೂ ನಿರಾಕರಿಸಲಾಗಿದೆ. ಕಾರ್ಮಿಕ ವರ್ಗದ ಮೇಲೆ ವೇತನಸ್ಥಗಿತವನ್ನು ಹೊರಿಸಲಾಗುತ್ತಿದೆ. ಆರನೇ ಪಂಚವಾರ್ಷಿಕಯೋಜನೆಯಲ್ಲಿ ನಿರೂಪಿಸಲಾಗಿರುವ "ನಿರ್ಯಾತ ಪೂರಕತೆ" ಮತ್ತು "ಆಯಾತ ಉದಾರೀಕರಣ"ದ ನೀತಿಗಳು ಸರ್ಕಾರದ ಆರ್ಥಿಕ ನೀತಿಗಳ ದಿವಾಳಿಕೋರತನವನ್ನು ತೋರಿಸಿವೆಯಲ್ಲದೆ ಬಹುರಾಷ್ಟ್ರ ಸಂಸ್ಥೆಗಳು ಮತ್ತು ಗುತ್ತೇದಾರಿಗಳಿಗೆ ಸಹಾಯಕವಾಗಿವೆ. ಇಂಥ ಕರಾಳ ಪರಿಸ್ಥಿತಿಯಲ್ಲಿ ಸೋವಿಯತ್ ಒಕ್ಕೂಟ ಮತ್ತಿತರ ಸಮಾಜವಾದಿ ದೇಶಗಳು ನೀಡುತ್ತಿರುವ ನೆರವು ಮಾತ್ರ ಒಂದು ಆಶಾಕಿರಣವಾಗಿದೆ.

ಅಂತರಾಷ್ಟ್ರೀಯ ಹಣಕಾಸು ನಿಧಿ (ಐ. ಎಂ. ಎಫ್.) ಯಿಂದ ಅಪಮಾನಕರ ಷರತ್ತುಗಳ ಮೇಲೆ ಆರು ಮಿಲಿಯನ್ ಡಾಲರ್‌ಗಳಷ್ಟು ಸಾಲವನ್ನು ಪಡೆದಿರುವ ಇಂದಿರಾಗಾಂಧಿ ಸರ್ಕಾರವು ರಾಷ್ಟ್ರೀಯ ಅಂಗೀಕಾರ ಪಡೆದ ನೀತಿಗಳಾದ ಸಾರ್ವಜನಿಕ ಕ್ಷೇತ್ರದ ವಿಕಾಸ, ಸ್ವಾವಲಂಬನೆ ಮತ್ತು ಆರ್ಥಿಕ ಸ್ವಾತಂತ್ರ್ಯಗಳನ್ನು ಕೈಬಿಟ್ಟಿದೆ ಹಾಗೂ ನಮ್ಮ ಸಾರ್ವಭೌಮತ್ವವನ್ನು ಒತ್ತೆಯಿಟ್ಟಿದೆ. ವೇತನಸ್ಥಗಿತದ ನೀತಿಯನ್ನು ಕಾರ್ಮಿಕ ವರ್ಗದ ಮೇಲೆ ಹೊರಿಸುವ ಯತ್ನ ಮುಂದುವರಿಯುತ್ತಿದೆ. ಗುತ್ತೇದಾರಿಗಳು-ಬಹುರಾಷ್ಟ್ರ ಸಂಸ್ಥೆಗಳಿಗೆ ನೀಡಲಾಗುತ್ತಿರುವ ಹೆಚ್ಚಿನ ರಿಯಾಯ್ತಿಗಳ ಜೊತೆಗೇ ಟ್ರೇಡ್ ಯೂನಿಯನ್‌ಗಳು ಹಾಗೂ ಅವುಗಳ ಹಕ್ಕುಗಳ ಮೇಲೆ ನಡೆಸಲಾಗುತ್ತಿರುವ ದಾಳಿಯು ಶೋಚನೀಯ ಮಾತ್ರವಲ್ಲದೆ ಈ ವಿನಾಶಕಾರಿ ಪ್ರವೃತ್ತಿಯು ಒಂದು ಹೊಸ ಅಪಾಯಕಾರಿ ಘಟ್ಟವನ್ನು ಸೂಚಿಸುತ್ತದೆ.

ಕಾಂಗ್ರೈ ಸರ್ಕಾರವು ಅನುಸರಿಸುತ್ತಿರುವ ಬಂಡವಾಳಶಾಹಿ ಹಾದಿಯ ಬೆಳವಣಿಗೆ, ಆಳವಾಗುತ್ತಿರುವ ಬಿಕ್ಕಟ್ಟು— ಇವುಗಳಿಂದಾಗಿ ಕಾನೂನು ಮತ್ತು ವ್ಯವಸ್ಥೆ ಸಂಪೂರ್ಣವಾಗಿ ಕುಸಿದುಬಿದ್ದಿದೆ. ಕೊಲೆ, ಮಾನಭಂಗ, ಡಕಾಯಿತಿ, ಬ್ಯಾಂಕ್ ದರೋಡೆ, ಹರಿಜನ-ಗಿರಿಜನರು ಮತ್ತಿತರ ದುರ್ಬಲ ವರ್ಗಗಳ ಮೇಲೆ ಅತ್ಯಾಚಾರ ಇತ್ಯಾದಿಗಳು ದಿನನಿತ್ಯದ ಘಟನೆಗಳಾಗಿವೆ. ಕೋಮುವಾದಿ, ಜಾತೀವಾದಿ, ಛಿದ್ರಕಾರಿ ಮತ್ತು ಪ್ರತ್ಯೇಕತಾವಾದಿ ಶಕ್ತಿಗಳು ತಲೆಯೆತ್ತಿದ್ದು ದೇಶದ ಐಕ್ಯತೆಗೇ ಅಪಾಯವನ್ನೊಡ್ಡಿವೆ. ಸರ್ವವ್ಯಾಪಕ ಭ್ರಷ್ಟಾಚಾರ ಮತ್ತು ಸಮಾಜವಿರೋಧಿ ಶಕ್ತಿಗಳೊಡನೆ ಕೆಲವು ಮಂತ್ರಿಗಳು, ಅಧಿಕಾರಿಗಳು ಹಾಗೂ ಪೋಲೀಸರು ಶಾಮೀಲಾಗಿರುವುದು ಈ ಪರಿಸ್ಥಿತಿಯ ಇನ್ನೊಂದು ಮುಖವಾಗಿದೆ.

ನಮ್ಮ ರಾಜ್ಯದ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಗುಂಡೂರಾವ್ ಸರ್ಕಾರವು ಈಗಾಗಲೇ ತನ್ನ ಕಾರ್ಮಿಕವರ್ಗ ವಿರೋಧಿ, ರೈತ ವಿರೋಧಿ ಮತ್ತು ಜನವಿರೋಧಿ ನೀತಿಗಳಿಗೆ ಕುಪ್ರಸಿದ್ಧವಾಗಿದೆ. ನೀರು ಮತ್ತು ಅಭಿವೃದ್ಧಿ ತೆರಿಗೆಗಳ ರದ್ದತಿ ಹಾಗೂ ತಮ್ಮ ಬೆಳೆಗಳಿಗೆ ಪ್ರತಿಫಲದಾಯಕ ಬೆಲೆಗಳನ್ನು ಕೇಳಿದ್ದಕ್ಕಾಗಿ ಸರ್ಕಾರವು ನರಗುಂದದಿಂದ ಭದ್ರಾವತಿಯವರೆಗೆ 66 ರೈತರನ್ನು ಕ್ರೂರ ರೀತಿಯಲ್ಲಿ ಗುಂಡುಗಳಿಗೆ ಬಲಿಯಿತ್ತಿದೆ. ಹೆಚ್ಚಿನ ಪ್ರತಿಫಲದಾಯಕ ಬೆಲೆಗಳು ಹಾಗೂ ನೀರು ಮತ್ತು ಅಭಿವೃದ್ಧಿ ತೆರಿಗೆಗಳ ಬಗ್ಗೆ ಗುಂಡೂರಾವ್ ಸರ್ಕಾರ ರೈತರಿಗೆ ನೀಡಿದ ಆಶ್ವಾಸನೆಗಳು ಇನ್ನೂ ಶೀತಾಗಾರದಲ್ಲಿವೆ. ನಿಪ್ಪಾಣಿಯಲ್ಲಿ ಚಳುವಳಿನಡೆಸಿದ ತಂಬಾಕು ಬೆಳೆಗಾರರ ಮೇಲೆ ದಾಳಿಮಾಡಲಾಯಿತು. ಅವರ ಸಮಸ್ಯೆಗಳು ಇನ್ನೂ ಪರಿಹಾರವಾಗಿಲ್ಲ. ಸಣ್ಣ ಮತ್ತು ಮಧ್ಯಮ ರೈತರ ಮೇಲಣ ಸಾಲಗಳ ಹೊರೆಯನ್ನು ರದ್ದುಮಾಡುವ ಬದಲಾಗಿ ಶಿವಮೊಗ್ಗ, ಬಿಜಾಪುರಗಳಲ್ಲಿ ಮಾಡಿದಂತೆ ಅವರ ಮನೆಗಳಿಗೆ ದಾಳಿಮಾಡಿ ಆಸ್ತಿಪಾಸ್ತಿಗಳನ್ನು ಜಪ್ತಿಮಾಡಲಾಗಿದೆ. ಕೃಷಿ ಕಾರ್ಮಿಕರ ವೇತನಗಳು ಬಹಳ ಕಡಿಮೆಯಿದ್ದು, ಅವರಿಗೆ ಸುಧಾರಿತ ವೇತನ ಮತ್ತು ಸೇವಾಭದ್ರತೆಗಳನ್ನು ಖಾತ್ರಿಗೊಳಿಸುವ ಯಾವ ಕಾಯ್ದೆಯೂ ಇಲ್ಲವಾಗಿದೆ ಭೂ ಸುಧಾರಣೆಗಳ ಜಾರಿಯು ಅಸಮರ್ಪಕವಾಗಿದೆ ಹಾಗೂ ಕುಂಟುತ್ತಿದೆ. ಬರಗಾಲ ಹಾಗೂ ಕ್ಷಾಮಗಳನ್ನು ತೊಡೆದುಹಾಕುವಂಥ ಶಾಶ್ವತ ಯೋಜನೆಗಳನ್ನು ಜಾರಿಗೆ ತರದೆ, ಬರಗಾಲ ಪೀಡಿತ ರೈತರಿಗೆ ಪರಿಣಾಮಕಾರಿ ಪರಿಹಾರ ಕೊಡದೆ ಆ ರೈತ ಸಮುದಾಯ ಕಷ್ಟಕಾರ್ಪಣ್ಯಗಳಿಂದ ತೊಳಲುತ್ತಿದೆ.

ಕಾರ್ಮಿಕ ವರ್ಗದ ಪರಿಸ್ಥಿತಿಯೂ ಇದೇ ರೀತಿಯಾಗಿದೆ. ಸರ್ಕಾರವೇ ಮಾಡಿಕೊಂಡಿದ್ದ ಒಪ್ಪಂದವನ್ನು ಜಾರಿಗೆ ತರಬೇಕೆಂದು ಐದು ತಿಂಗಳುಗಳ ಕಾಲ ಬೆಂಗಳೂರಿನ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು ಹೋರಾಟ ನಡೆಸಿದಾಗ ಅವರ ಮೇಲೆ ಪೋಲೀಸರ ಗುಂಡುಗಳು ಹಾರಿ ಮೂವರನ್ನು ಬಲಿತೆಗೆದುಕೊಂಡವು. ಮೈಕೋ, ಐಟಿಸಿ ಮತ್ತು ಮೈಸೂರು ವೈರ್‌ಗಳಲ್ಲಾಗಿರುವಂತೆ ಕಾರ್ಮಿಕರ ಮೇಲೆ ಪೋಲೀಸರ ಮತ್ತು ಗೂಂಡಾಗಳ ದಾಳಿಗಳು ಪ್ರತಿದಿನವೂ ನಡೆಯುತ್ತಿವೆ. ಶ್ರಮಜೀವಿಗಳು ಮತ್ತು ಅಸಂಘಟಿತ ಕಾರ್ಮಿಕರು ತೀರಾ ತೊಂದರೆಗೊಳಗಾಗಿದ್ದಾರೆ. ಕನಿಷ್ಠ ಕೂಲಿಯ ನಿಗದಿಯಲ್ಲೇ ಉನ್ನತಮಟ್ಟಗಳಲ್ಲಿ ಭ್ರಷ್ಟಾಚಾರ ನಡೆದಿದ್ದು, ಅದರ ಅನುಷ್ಠಾನದ ಬಗ್ಗೆಯಂತೂ ಹೇಳುವುದೇ ಬೇಡ. ಕಾರ್ಮಿಕ ವರ್ಗದ ಸೇವಾ ಪರಿಸ್ಥಿತಿಗಳ ಸುಧಾರಣೆಯ ಬಗ್ಗೆ ಯಾವ ಕಾಯ್ದೆಯನ್ನೂ ತರಲಾಗಿಲ್ಲ. ವಿದ್ಯುತ್ ಕೊರತೆ, ಪದೇ ಪದೇ ವಿದ್ಯುತ್ ಸರಬರಾಜಿನಲ್ಲಿ ತಡೆಗಳು, ವಿದ್ಯುತ್ ರಂಗದಲ್ಲಿ ಯೋಜನೆಯಿಲ್ಲದಿರುವುದು ಇವುಗಳಿಂದಾಗಿ ಕೈಗಾರಿಕೆಗಳ ಮತ್ತು ಕಾರ್ಮಿಕವರ್ಗದ ಮೇಲೆ ದುಷ್ಪರಿಣಾಮವಾಗಿದೆ

ವಿದ್ಯಾರ್ಥಿ ಸಮುದಾಯವು ಅಸಂತೃಪ್ತಿಯಿಂದ ಕುದಿಯುತ್ತಿದೆ. ಆರ್ಥಿಕವಾಗಿ ದುರ್ಬಲವಾಗಿರುವ ವರ್ಗಗಳ ವಿದ್ಯಾರ್ಥಿಗಳಿಗೆ ಸೂಕ್ತ ಹಾಸ್ಟೆಲ್ ಮತ್ತು ವಿದ್ಯಾ ಸೌಲಭ್ಯಗಳ ಕೊರತೆ, ಕಿಂಡರ್‌ಗಾರ್ಟನ್ ಮಟ್ಟದಿಂದಲೇ ಹೆಚ್ಚು ದೇಣಿಗೆಗಳನ್ನು ಲೂಟಿ ಮಾಡುತ್ತಿರುವ ಖಾಸಗಿ ವಿದ್ಯಾಸಂಸ್ಥೆಗಳು, ಕ್ಯಾಪಿಟೇಶನ್ ಶುಲ್ಕವನ್ನು ರದ್ದುಮಾಡುವ ಬದಲಾಗಿ ಅದಕ್ಕೆ ಕೊಡಲಾಗಿರುವ ಕಾನೂನುಬದ್ಧತೆ, ಮಕ್ಕಳ ವಿದ್ಯಾಭ್ಯಾಸಕ್ಕೆ ಸೂಕ್ತ ವ್ಯವಸ್ಥೆಯ ಕೊರತೆ-ಇವುಗಳು ಸಧ್ಯದ ಪರಿಸ್ಥಿತಿಯ ಅಂಗಗಳಾಗಿವೆ. ಪ್ರಸಕ್ತ ವಿದ್ಯಾಪದ್ಧತಿಯಲ್ಲಿ ವಿದ್ಯಾರ್ಥಿಗಳು ಪ್ರಯೋಗ ಪಶುಗಳಾಗಿದ್ದಾರೆ. ನಮ್ಮ ರಾಜ್ಯದ ಯುವಜನರು ನಿರುದ್ಯೋಗಕ್ಕೆ ಸಿಕ್ಕಿ ನರಳುತ್ತಿದ್ದಾರೆ. ನಿರುದ್ಯೋಗಿಗಳಿಗೆ ಉದ್ಯೋಗ ಕೊಡಬಲ್ಲ ಯಾವ ಹೊಸ ಸಾರ್ವಜನಿಕ ಕ್ಷೇತ್ರದ ಉದ್ಯಮವೂ ನಮ್ಮ ರಾಜ್ಯದಲ್ಲಿ ಸ್ಥಾಪನೆಯಾಗಿಲ್ಲ. ವಿಜಯನಗರ ಉಕ್ಕು ಕಾರ್ಖಾನೆ ಇನ್ನೂ ಕನಸಾಗಿಯೇ ಉಳಿದಿದೆ; ಕಾರವಾರ ಬಂದರು ಇನ್ನೂ ಅಭಿವೃದ್ಧಿಗೊಳ್ಳಬೇಕಾಗಿದೆ. ಮುಖ್ಯ ನೀರಾವರಿ ಕಾಮಗಾರಿಗಳು ನಿಂತುಹೋಗಿವೆ ಹಾಗೂ ಕುಂಟುತ್ತಿವೆ. ಬೆಂಗಳೂರು-ಗುಂತಕಲ್, ಬೆಂಗಳೂರು-ಮೀರಜ್ ಮತ್ತು ಬೆಂಗಳೂರು-ಮೈಸೂರು ರೈಲು ಹಾದಿಗಳನ್ನು ಬ್ರಾಡ್ ಗೇಜಿಗೆ ಪರಿವರ್ತಿಸುವ ಕಾರ್ಯವನ್ನು ಸಮರ್ಪಕವಾಗಿ ಕೈಗೊಳ್ಳಲಾಗಿಲ್ಲ. ಅಭಿವೃದ್ಧಿಕಾರ್ಯಗಳನ್ನು ಕೈಬಿಡಲಾಗಿದ್ದು, ಇದಕ್ಕೆ ಬಜೆಟ್ ಸಹ ಸಾಕ್ಷಿಯಾಗಿದೆ. ರಾಜ್ಯದಲ್ಲಿ ಕಾನೂನು ಮತ್ತು ವ್ಯವಸ್ಥೆ ಕುಸಿದುಬಿದ್ದಿದೆ. ಬೆಂಗಳೂರಿನಲ್ಲಿ ಗೂಂಡಾಗಳ ಚಟುವಟಿಕೆಗಳು, ಡಕಾಯಿತಿಗಳು ಮತ್ತು ಬ್ಯಾಂಕ್ ದರೋಡೆಗಳು, ಕಾರ್ಮಿಕ ವರ್ಗ - ರೈತರ ಮತ್ತು ಜನತೆಯ ಮೇಲೆ ಪೋಲೀಸರ ದಾಳಿಗಳು-ಇವೆಲ್ಲವೂ ಪರಿಸ್ಥಿತಿಯು ವಿಷಮಿಸಿರುವುದಕ್ಕೆ ಸಾಕ್ಷಿಯಾಗಿದೆ

ಎಲ್ಲಾ ಜೀವನಾವಶ್ಯಕ ವಸ್ತುಗಳ ಬೆಲೆಗಳು ಏರುತ್ತಿವೆ. ಗುಂಡೂರಾವ್ ಸರಕಾರವು ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ಇಳಿಸಲು ವಿಫಲವಾಗಿದೆ. ಅದು ಆಹಾರಧಾನ್ಯಗಳ ಸಗಟು

ವ್ಯಾಪಾರವನ್ನು ವಹಿಸಿಕೊಂಡು ಪರಿಣಾಮಕಾರಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಜಾರಿಗೊಳಿಸಲೂ ನಿರಾಕರಿಸಿದೆ. ಹರಿಜನರು, ಗಿರಿಜನರು ಹಾಗೂ ಸಮಾಜದ ಇತರ ಅಲ್ಪಸಂಖ್ಯಾತರಿಗೆ ಕೊಡಲಾಗುತ್ತಿರುವ "ರಕ್ಷಣೆ"ಯ ಬಗ್ಗೆ ಕಾಗದದ ಮೇಲೆ ಬಹಳ ಪ್ರಚಾರ ನಡೆದಿದೆಯಷ್ಟೆ; ವಾಸ್ತವವಾಗಿ ಅವರುಗಳು ದುಸ್ಥಿತಿಯಲ್ಲಿದ್ದಾರೆ.

ಇವೆಲ್ಲವುಗಳೊಡನೆ ಎಲ್ಲಾ ಮಟ್ಟಗಳಲ್ಲೂ ಭ್ರಷ್ಟಾಚಾರ ತುಂಬಿತುಳುಕುತ್ತಿದೆ. ಸಿ. ಎಂ. ಇಬ್ರಾಹಿಂ ಮತ್ತು ಎಫ್. ಎಂ. ಖಾನ್ ಪ್ರಕರಣಗಳು, ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಬಯಲಿಗೆಳೆದ ಸಿಮೆಂಟ್ ಪ್ರಕರಣ, ಪತ್ರಕರ್ತರು, ಕಾರ್ಮಿಕ ನಾಯಕರು, ಯುವಜನ ನಾಯಕರು ಹಾಗೂ ತಮ್ಮ ಪಕ್ಷದೊಳಗೇ ಇರುವ ಭಿನ್ನಮತೀಯರ ಮೇಲೆ ಯುವ ಕಾಂಗ್ರೆಸ್ ಜನರು ನಡೆಸಿದ ಗೂಂಡಾ ದಾಳಿಗಳು ರಾವ್ ಸರ್ಕಾರ ಇಳಿದಿರುವ ಅಧಃಪಾತಾಳದ ಚಿಹ್ನೆಗಳಾಗಿವೆ. ಮಂತ್ರಿಗಳ ಅಸಾಮರ್ಥ್ಯದಿಂದಾಗಿ ರಾಜ್ಯದಲ್ಲಿ ನೌಕರಶಾಹಿಯು ಹದ್ದುಮೀರಿ ವರ್ತಿಸುತ್ತಿದೆ. ವರ್ಷಗಳೇ ಉರುಳಿದರೂ ಸಹ ಕಾರ್ಪೊರೇಷನ್‌ಗಳು ಮತ್ತು ನಗರ ಸಭೆಗಳಿಗೆ ಚುನಾವಣೆಗಳನ್ನು ನಡೆಸದಿರುವ ಸಮಿತಿ ವರದಿಯ ಬಗ್ಗೆ ಸಂಬಂಧಪಟ್ಟ ಎಲ್ಲರ ಒಟ್ಟಭಿಪ್ರಾಯವನ್ನು ಪರಿಗಣಿಸದೆ, ಈ ವರದಿಯ ಬಗ್ಗೆ ನಡೆಯುತ್ತಿರುವ ಚಳವಳಿಗೆ ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ಇದರಿಂದಾಗಿ ರಾಜ್ಯದಲ್ಲಿ ಕೋಮು ಉದ್ರಿಕ್ತತೆಯುಂಟಾಗಿದ್ದು, ಪೋಲಿಸ್ ಗೋಲಿಬಾರಿನಲ್ಲಿ ಮೂವರು ಮಡಿದಿದ್ದಾರೆ.

ಈ ಹಿನ್ನೆಲೆಯಲ್ಲೇ ಅಧಿಕಾರಶಾಹಿ ಸರ್ಕಾರದ ಪ್ರಜಾತಂತ್ರ ವಿರೋಧಿ ಕ್ರಮಗಳು ಹೆಚ್ಚುತ್ತಿವೆ. ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರು ಪಾರ್ಲಿಮೆಂಟರಿ ವ್ಯವಸ್ಥೆಯ ಸ್ಥಾನದಲ್ಲಿ ಅಧ್ಯಕ್ಷೀಯ ವ್ಯವಸ್ಥೆ ತರಲು ಯತ್ನಿಸುತ್ತಿದ್ದಾರೆ. ನ್ಯಾಯಾಂಗವನ್ನು ತಮ್ಮ ಕೈಯಾಳಾಗಿ ಮಾಡಿಕೊಳ್ಳಲು ಬೆದರಿಕೆಗಳನ್ನು ಹಾಕಲಾಗುತ್ತಿದೆ. ಪಶ್ಚಿಮ ಬಂಗಾಳ ಮತ್ತು ಕೇರಳಗಳಲ್ಲಿ ಎಡ ಪಕ್ಷಗಳ ನೇತೃತ್ವದಲ್ಲಿದ್ದ ಸರ್ಕಾರಗಳ ಮೇಲೆ ದಾಳಿ ಮಾಡಲಾಯಿತು ಹಾಗೂ ಕೇರಳದಲ್ಲಿ ಅಲ್ಪಾವಧಿಯ ಅಲ್ಪಮತದ ಸರ್ಕಾರವನ್ನು ಕಾಂಗ್ರೆಸ್ ನೇತೃತ್ವದಲ್ಲಿ ಅಧಿಕಾರಕ್ಕೆ ತರಲಾಯಿತು. ರಾಷ್ಟ್ರೀಯ ಭದ್ರತಾ ಮತ್ತು ಅಗತ್ಯಸೇವಾ ಸಂರಕ್ಷಣಾ ಕಾಯ್ದೆಗಳಂಥ ಉಗ್ರ ಕ್ರಮಗಳನ್ನು ವಹಿಸುವ ಮೂಲಕ ಕಾರ್ಮಿಕವರ್ಗದ ಮತ್ತು ಜನತೆಯ ಪ್ರಜಾತಾಂತ್ರಿಕ ಹಕ್ಕುಕೆಂಡು ಬಂದಿದೆ. ಕೋಮುವಾದವು ನಮ್ಮ ದೇಶದಲ್ಲಿ ವಿವಿಧ ರೀತಿಗಳಲ್ಲಿ ತಲೆಯೆತ್ತಲು ಯತ್ನಿಸುತ್ತಿದೆ; ಆರೆಸ್ಸೆಸ್ ಮತ್ತು ಜಮಾತೆ ಇಸ್ಲಾಮಿಗಳು ಇಂಥ ಚಟುವಟಿಕೆಗಳ ಮುಂಚೂಣಿಯಲ್ಲಿವೆ. ಪ್ರತ್ಯೇಕತಾವಾದಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳ ಚಟುವಟಿಕೆಗಳು ದೇಶದ ಹಾಗೂ ಜನತೆಯ ಐಕ್ಯತೆಗೆ ದೊಡ್ಡ ಅಪಾಯವನ್ನು ತಂದೊಡ್ಡಿವೆ. ಗುಂಡೂರಾಯರಂಥ ಕೆಲವು ಕಾಂಗ್ರೆಸ್ ಮಂತ್ರಿಗಳು ಎಲ್ಲಾ ಬಗೆಯ ಮತೀಯ ಸಮಾರಂಭಗಳಲ್ಲಿ ಭಾಗವಹಿಸುತ್ತಿರುವುದೂ ಸಹ ಕೋಮುಶಕ್ತಿಗಳ ಉತ್ಕರ್ಷಕ್ಕೆ ನೆರವಾಗಿದೆ. ಕೋಮುವಾದದ ಹಾವಳಿಯು ವರ್ಗ ಐಕ್ಯತೆಗೆ, ದುಡಿಯುವ ವರ್ಗದ ಐಕ್ಯತೆಗೆ ಕಂಟಕವಾಗಿದೆ ಹಾಗೂ ಅದು ನಮ್ಮ ಗುರಿಯ ಸಾಧನೆಗೆ ಮಾರಕವಾಗಿದೆ. ಜಾತೀಯವಾದಿ ಮತ್ತು ಕೋಮುವಾದಿ ಶಕ್ತಿಗಳ ಅಪಾಯವನ್ನು ಮನಗಂಡು ಈ ಸಮಾವೇಶವು ಅವುಗಳನ್ನು ಇತರ ಜಾತ್ಯತೀತ ಮತ್ತು ಪ್ರಜಾತಾಂತ್ರಿಕ ಶಕ್ತಿಗಳ ಸಹಕಾರದೊಡನೆ ಸಂಪೂರ್ಣವಾಗಿ ಎದುರಿಸಲು ನಿರ್ಣಯಿಸುತ್ತದೆ.

ಈ ಹಿನ್ನೆಲೆಯಲ್ಲೇ ನಾವು ಬೂರ್ಷ್ವಾ ಪಕ್ಷಗಳ ಐಕ್ಯತೆಯಾಗಲೀ, ಭಾ.ಜ.ಪ. ವಾಗಲೀ ಕಾಂಗ್ರೆಸ್‌ಗೆ ಬದಲಿಯಾಗಲಾರದೆಂದು ಅಭಿಪ್ರಾಯಪಡುತ್ತೇವೆ. ಎಡ ಸಮರ್ಪಕವಾಗಿದೆಯೆಂದು ನಾವು ಸ್ವಾಗತಿಸುತ್ತೇವೆ. ಇಂದಿನ ಪರಿಸ್ಥಿತಿಯಲ್ಲಿ ಸಿ. ಪಿ. ಐ. (ಎಂ.) ಹಾಗೂ ಲೋಕದಳಗಳನ್ನೂ ಒಳಗೊಂಡಂತೆ ಈ ರಂಗವನ್ನು ವಿಧಾನ ಮಂಡಲದ ಹೊರಗೂ ಸ್ಥಾಪಿಸುವುದು ಅಗತ್ಯವೆಂದು ನಮ್ಮ ಅಭಿಪ್ರಾಯವಾಗಿದೆ. ಈ ರೀತಿಯ ರಂಗವೊಂದು ನಮ್ಮ ರಾಜ್ಯದ ಜನತೆಯ ಆಶೋತ್ತರಗಳನ್ನು ಪ್ರತಿಬಿಂಬಿಸಬೇಕಾದಲ್ಲಿ ಅದಕ್ಕೆ ಕಾರ್ಮಿಕ ವರ್ಗ, ಕೃಷಿ ಕಾರ್ಮಿಕರು, ಬಡರೈತರು, ಸಾಮಾಜಿಕ ದಬ್ಬಾಳಿಕೆ ಎದುರಿಸುತ್ತಿರುವ ಸಮುದಾಯಗಳು, ಮಧ್ಯಮವರ್ಗದ ನೌಕರರು ಹಾಗೂ ಜನತೆಯ ಬಡ ವಿಭಾಗಗಳ ಹಿತಗಳನ್ನು ರಕ್ಷಿಸುವ ಕಾರ್ಯಕ್ರಮವಿರಬೇಕು ಹಾಗೂ ಅಂಥರಂಗವು ಈ ಕಾರ್ಯಕ್ರಮವನ್ನು ಆಧರಿಸಿ ಸಾಮೂಹಿಕ ಹೋರಾಟಗಳನ್ನು ನಡೆಸುವಂತಾಗಬೇಕೆಂದು ನಮ್ಮ ಅಭಿಪ್ರಾಯವಾಗಿದೆ.

ಸಿ.ಪಿ.ಐ. ಮತ್ತು ಸಿ.ಪಿ.ಐ. (ಎಂ.)ಗಳ ಈ ಜಂಟಿ ಸಮಾವೇಶವು ಜನತೆಯ ಸಮಸ್ಯೆಗಳ ಬಗ್ಗೆ ಜಂಟಿ ಕಾರ್ಯಾಚರಣೆಗಳನ್ನು ಐಕ್ಯತೆಯಿಂದ ನಡೆಸುವುದು ಹಾಗೂ ಇತರ ಪ್ರಜಾತಾಂತ್ರಿಕ ಮತ್ತು ಜಾತ್ಯತೀತ ಶಕ್ತಿಗಳ ಸಹಕಾರದೊಂದಿಗೆ ಎಡ ಮತ್ತು ಪ್ರಜಾತಾಂತ್ರಿಕ ಬದಲಿಯ ನಿರ್ಮಾಣವನ್ನು ಮುಂದೆ ತರುವುದು ಎರಡೂ ಪಕ್ಷಗಳ ಪ್ರಮುಖ ಕಾರ್ಯಭಾರವಾಗಿದೆಯೆಂದು ಪರಿಗಣಿಸುತ್ತದೆ.

ನಮ್ಮ ರಾಜ್ಯದಲ್ಲಿ ಪ್ರತಿಯೊಬ್ಬ ಕಮ್ಯೂನಿಸ್ಟ್ ಹಾಗೂ ಜನತೆಯ ಹಿತಗಳ ಪರವಾಗಿರುವವರು ಕೆಳಕಂಡ ಕಾರ್ಯಗಳನ್ನು ನಿರ್ವಹಿಸುವುದು ತಮ್ಮ ಕರ್ತವ್ಯವೆಂದು ತಿಳಿಯಬೇಕೆಂದು ಈ ಸಮಾವೇಶವು ಘೋಷಿಸುತ್ತದೆ:—

1. ಶಾಂತಿಯ ಪರವಾಗಿ ಮತ್ತು ಅಮೆರಿಕನ್ ಸಾಮ್ರಾಜ್ಯಶಾಹಿಯ ವಿರುದ್ಧವಾಗಿ ಹೋರಾಡುವುದು.

2. ಕಾಂಗ್ರೆಸ್ ಸರ್ಕಾರದ ಅಧಿಕಾರಶಾಹಿ ಮತ್ತು ಜನವಿರೋಧೀ ನೀತಿಗಳ ವಿರುದ್ಧ ಹೋರಾಡುವುದು.

3. ಕೋಮುವಾದಿ, ಸಂಕುಚಿತವಾದಿ, ಪ್ರತ್ಯೇಕತಾವಾದಿ ಮತ್ತು ವಿಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡುವುದು.

4. ಜನತೆಯ ಹೋರಾಟಗಳ ಮೂಲಕ ಎಡ ಮತ್ತು ಪ್ರಜಾತಾಂತ್ರಿಕ ಐಕ್ಯತೆಯನ್ನು ಕಟ್ಟುವುದು.

ನಮ್ಮ ಅಮೂಲ್ಯ ಗುರಿಯಾದ ಸಮಾಜವಾದದತ್ತ ಸಾಗುವುದಕ್ಕಾಗಿ ಮೇಲ್ಕಂಡ ಕರ್ತವ್ಯಗಳನ್ನು ಜಾರಿ ಮಾಡಲು ಈ ಸಮಾವೇಶವು ಪ್ರತಿಜ್ಞೆ ಮಾಡುತ್ತದೆ. ○

--ಸಮಾವೇಶದಲ್ಲಿ ಅಂಗೀಕರಿಸಿರುವ ಪ್ರಕಟಣೆ

ಮೂಲಕ ಪ್ರಜಾತಂತ್ರ ಮತ್ತು ಪ್ರಜಾತಾಂತ್ರಿಕ ತತ್ವಗಳಿಗೆ ತಿಲಾಂಜಲಿ ನೀಡಲಾಗಿದೆ. ಮೇಯರ್‌ಗಳು, ಉಪಮೇಯರ್‌ಗಳು ಮತ್ತು ಕೌನ್ಸಿಲರ್‌ಗಳನ್ನು ನೇಮಕಮಾಡುವ ನಿರ್ಧಾರ ಕೈಗೊಂಡು ಪ್ರಜಾತಂತ್ರಕ್ಕೆ ಇನ್ನಷ್ಟು ಅವಮಾನ ಮಾಡಲಾಗಿದೆ. ರಾಷ್ಟ್ರೀಕೃತ ಮಾರ್ಗಗಳಲ್ಲಿ ಲೆಕ್ಕವಿಲ್ಲದಷ್ಟು ಖಾಸಗಿ ಬಸ್‌ಗಳನ್ನು ಓಡಿಸಲು ಪರವಾನಗಿ ಕೊಟ್ಟು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಧ್ವಂಸಮಾಡಲು ಯತ್ನಿಸಲಾಗುತ್ತಿದೆ.

ಸಾಮಾನ್ಯ ನಾಗರಿಕ ಸೌಲಭ್ಯಗಳಾದ ನೀರು, ದೀಪ, ಮನೆಗಳು ಮತ್ತು ರಸ್ತೆಗಳಿಗಾಗಿ ಗ್ರಾಮಗಳ ಮತ್ತು ನಗರಗಳ ಜನರು ತೊಂದರೆಗೊಳಗಾಗಿದ್ದಾರೆ. ಜನತಾ ಮನೆಗಳ ಯೋಜನೆ ಕುಂಟುತ್ತಿದೆ. ಕರ್ನಾಟಕದ ನಗರಗಳು ಮತ್ತು ಪಟ್ಟಣಗಳಲ್ಲಿ ಆರ್ಥಿಕವಾಗಿ ದುರ್ಬಲರಾಗಿರುವವರಿಗೆ ಮನೆಗಳನ್ನು ಕಟ್ಟುವ ಯಾವುದೇ ಯೋಜನೆ ಇಲ್ಲವಾಗಿದೆ.

ಗುಂಡೂರಾವ್ ಸರ್ಕಾರವು ಕನ್ನಡವು ಆಡಳಿತದ ಎಲ್ಲಾ ಮಟ್ಟಗಳ ಭಾಷೆಯಾಗಬೇಕೆಂಬ ನಿರ್ಣಯವನ್ನು ಪರಿಣಾಮಕಾರಿಯಾಗಿ ಜಾರಿ ಮಾಡಲಿಲ್ಲ. ಅದು ಸಂಸ್ಕೃತವು ಪ್ರಥಮ ಭಾಷೆಯಾಗಿರಬೇಕೆಂಬ ಆಜ್ಞೆಯನ್ನು ಆತುರದಿಂದ ಹೊರಡಿಸಿತು; ನಂತರ ಅದನ್ನು ಹಿಂತೆಗೆದು ಗೋಕಾಕ ಸಮಿತಿಯನ್ನು ನೇಮಿಸಿತು. ಗೋಕಾಕ ಗಳನ್ನು ಹತ್ತಿಕ್ಕಲು ಯತ್ನಿಸಲಾಗುತ್ತಿದೆ. ಕಾರ್ಮಿಕವರ್ಗದ ಹಿತಗಳಿಗೆ ವಿರುದ್ಧವಾದ ಅಂಶಗಳನ್ನೊಳಗೊಂಡ ಹೊಸ ಕೈಗಾರಿಕಾ ಸಂಬಂಧಗಳ ಮಸೂದೆಯೊಂದನ್ನು ತರುವ ಮೂಲಕ ಟ್ರೇಡ್ ಯೂನಿಯನ್ ಹಕ್ಕುಗಳನ್ನು ಮೊಟಕುಮಾಡುವ ದಿಸೆಯಲ್ಲಿ ಮತ್ತೊಂದು ಹೆಜ್ಜೆಯನ್ನಿಡಲಾಗಿದೆ. ಕರ್ನಾಟಕದಲ್ಲಿ ಅನ್ಯಾಯಕರ ತೆರಿಗೆ – ಸಾಲಗಳ ಮರುಪಾವತಿಯ ವಿರುದ್ಧ ಪ್ರಚಾರ ಮಾಡುವುದು ಜೈಲುಶಿಕ್ಷೆಯೂ ಸೇರಿದಂತೆ ಅಪರಾಧವಾಗಿದೆ

–ಪರಿಸ್ಥಿತಿಯು ಕಾಂಗ್ರೆಸ್ ಸರ್ಕಾರಕ್ಕೆ ಒಂದು ಬದಲಿಯ-ಜನತೆಯ ಸಮಸ್ಯೆಗಳನ್ನು ನಿಜವಾಗಿಯೂ ಪರಿಹರಿಸಿ ದೇಶವನ್ನು ಪ್ರಗತಿಪಥದತ್ತ ಒಯ್ಯಬಲ್ಲ ಬದಲಿಯ–ಪರವಾಗಿದೆ. ಬೂರ್ಷ್ವಾ ಪಕ್ಷಗಳು ವೈಯಕ್ತಿಕವಾಗಿಯೋ ಇಲ್ಲವೇ ಸಾಮೂಹಿಕವಾಗಿಯೋ ತಾವುಗಳೇ ಬದಲಿಯೆಂದು ಹೇಳಿಕೊಳ್ಳಲು ಯತ್ನಿಸುತ್ತಿವೆ. ವಿಶೇಷವಾಗಿ ಭಾ.ಜ.ಪ.ವನ್ನು ಕಾಂಗ್ರೆಸ್‌ಗೆ ಬದಲಿಯೆಂದು ಮುಂದು ತರಲಾಗುತ್ತಿದೆ. ಆರೆಸ್ಸೆಸ್‌ನ ರಾಜಕೀಯ ಅಂಗವಾಗಿರುವ ಭಾ.ಜ.ಪ.ವು ತೀರಾ ಕೋಮುವಾದಿ, ಗುತ್ತೇದಾರಿಪರ, ಸಾಮ್ರಾಜ್ಯಶಾಹಿಪರ ಹಾಗೂ ಕಮ್ಯೂನಿಸ್ಟ್ ವಿರೋಧಿ ಪಕ್ಷವೆಂಬುದನ್ನು ಎಲ್ಲ ಎಡ ಪಕ್ಷಗಳೂ ಒಪ್ಪುತ್ತವೆ. ಈ ದೇಶದಲ್ಲಿ ನಡೆದ ಎಲ್ಲಾ ಕೋಮು ಗಲಭೆಗಳಲ್ಲೂ ಆರೆಸ್ಸೆಸ್‌ನ ಕೈವಾಡವಿರುವುದು ಸ್ಪಷ್ಟವಾಗಿ ಮತ್ತು ಪ್ರಜಾತಾಂತ್ರಿಕಶಕ್ತಿಗಳ ಐಕ್ಯತೆ ಮಾತ್ರವೇ ಸಧ್ಯದ ಪರಿಸ್ಥಿತಿಗೆ ನೈಜ ಬದಲಿಯಾಗಬಲ್ಲದು. ಜನತೆಯ ಜ್ವಲಂತ ಸಮಸ್ಯೆಗಳನ್ನು ಬಂಡವಾಳಶಾಹಿ ಸಾಮಾಜಿಕ–ಆರ್ಥಿಕ ವ್ಯವಸ್ಥೆಯೊಳಗೆ ಪರಿಹರಿಸುವುದು ಅಸಾಧ್ಯವೆಂದು ಮಾತ್ರ ನಾವು ಎಡ ಮತ್ತು ಪ್ರಜಾತಾಂತ್ರಿಕ ಬದಲಿಯ ಪರವಾಗಿಲ್ಲ: ಈ ಬದಲಿಯ ತುರ್ತು ಅವಶ್ಯಕತೆ ಹಾಗೂ ಸಾಧ್ಯತೆಗಳಿಗಾಗಿಯೂ ಸಹ ನಾವು ಇದರ ಪರವಾಗಿದ್ದೇವೆ. ಜನತೆಯ ಸಮಸ್ಯೆಗಳನ್ನು ಆಧರಿಸಿರುವ ಅತಿ ವಿಶಾಲ ಸಾಮೂಹಿಕ ಐಕ್ಯತಾ ಕಾರ್ಯಾಚರಣೆಗಳು ಮತ್ತು ಸಮರಶೀಲ ಹೋರಾಟಗಳಿಂದ ಮಾತ್ರ ಈ ಬಗೆಯ ಎಡ ಮತ್ತು ಪ್ರಜಾತಾಂತ್ರಿಕ ಐಕ್ಯತೆಯನ್ನು ಕಟ್ಟಲು ಸಾಧ್ಯವೆಂದು ನಮ್ಮ ನಂಬಿಕೆಯಾಗಿದೆ. ದೇಶದ ಜನತೆಯ ವಿವಿಧ ವಿಭಾಗಗಳು ತಮ್ಮ ಹಿತಗಳ ರಕ್ಷಣೆಗಾಗಿ ಸಾಮೂಹಿಕ ಹೋರಾಟ-ಚಳವಳಿಗಳನ್ನು ನಡೆಸುತ್ತಿರುವುದು ಸಂತೋಷದಾಯಕ. ಈ ನಿಟ್ಟಿನಲ್ಲಿ ಕರ್ನಾಟಕದಲ್ಲೂ ಸಹ ರೈತರ ಐತಿಹಾಸಿಕ ನರಗುಂದ – ಬೆಂಗಳೂರು ಯಾತ್ರೆ ಹಾಗೂ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಹೋರಾಟಗಳು ನಡೆದಿವೆ. ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್–ಎಸ್ (ಈಗ ಕರ್ನಾಟಕ ಕ್ರಾಂತಿರಂಗ), ಜನತಾ ಮತ್ತು ಸಿ. ಪಿ. ಐ. ಶಾಸಕರು ರಚಿಸಿಕೊಂಡಿರುವ ಸಂಯುಕ್ತ ಪ್ರಜಾತಾಂತ್ರಿಕ ರಂಗವು

ಸಾವು, ಸಾಲ್ವಾಡೋರನಲ್ಲಿ

ಸಾಲ್ವಾಡೋರನಲ್ಲಿ, ಸಾವು ಇನ್ನೂ ಸಹರೆಗೆ ನಿಂತಿದೆ.
ಸಾವನ್ನಪ್ಪಿದ ರೈತರ ರಕ್ತ
ಇನ್ನೂ ಒಣಗಿಲ್ಲ, ಕಾಲ ಅದನ್ನಿನ್ನೂ ಒಣಗಿಸುತ್ತಿಲ್ಲ,
ರಸ್ತೆಗಳ ಮೇಲಿಂದ ಮಳೆ ಅದನ್ನಿನ್ನೂ ತೊಳೆದು ಹಾಕುತ್ತಿಲ್ಲ.
ಹದಿನೈದು ನೂರು ಪ್ರಾಣಗಳು ಮಶೀನುಗನ್ನಿಗೆ ತುತ್ತಾದವು.
ಮಾರ್ಟಿನೆಝ್* ಆ ಕೊಲೆಗಡುಕನ ಹೆಸರು.
ಅಂದಿನಿಂದ ರಕ್ತಮಯ ವಾಸನೆಯೊಂದು ನೆನೆಸಿ ಹಾಕಿದೆ
ಸಾಲ್ವಾಡೋರಿನವರ ತಾಯಿನಾಡನ್ನು, ತಿಂಡಿಯನ್ನು, ಪಾನೀಯವನ್ನು

—ಪಾಬ್ಲೋ ನೆರೂದ

[*1931-1944ರ ವರೆಗೆ ಎಲ್ ಸಾಲ್ವಾಡೋರನಲ್ಲಿ ಮಾರ್ಟಿನೆಝನ ಸರ್ವಾಧಿಕಾರಿ ಆಳ್ವಿಕೆ ಇತ್ತು.]

ಚಿಲಿಯ ಪ್ರಸಿದ್ಧ ಕಮ್ಯುನಿಸ್ಟ್ ಕವಿ ಪಾಬ್ಲೋ ನೆರೂದ ನಿಜವಾಗಿಯೂ ಊಹಿಸಿರಲಿಕ್ಕಿಲ್ಲ ತಾನು ಈ ಕವಿತೆ ಬರೆದು ನಲವತ್ತು ವರ್ಷಗಳ ನಂತರವೂ ಕೂಡ ಎಲ್‌ಸಾಲ್ವಾಡೋರನಲ್ಲಿ 'ಕಾಲ ರಕ್ತವನ್ನು ಒಣಗಿಸುತ್ತಿಲ್ಲ'ಎಂದು. ಸಾಮ್ರಾಜ್ಯವಾದದ ಕಾಲ ಕೊನೆಗೊಳ್ಳುವುದಕ್ಕೆ ಮೊದಲು ಅದೆಷ್ಟು ತಾಣಗಳಲ್ಲಿ ಮನುಷ್ಯರಕ್ತ ಹರಿದೀತೆಂದು ಯಾರು ಹೇಳಬಲ್ಲರು ? ಇಂದು ಅಮೇರಿಕನ್ ಸಾಮ್ರಾಜ್ಯವಾದವು ಎಲ್ ಸಾಲ್ವಾಡೋರನಲ್ಲಿ ಹಿಂದೆಂದಿಗಿಂತಲೂ ಭಯಂಕರವಾದ ರಕ್ತಪಾತ ನಡೆಸಿದೆ. ಆದರೆ ವಿಯೆಟ್‌ನಾಮ್, ನಿಕಾರಾಗುವಗಳ ನಂತರ ಇಂದಿಲ್ಲ ನಾಳೆ ಎಲ್‌ಸಾಲ್ವಾಡೋರಿನಿಂದ ಹಾಗೂ ಕೊನೆಗೆ ಇಡೀ ಜಗತ್ತಿನ ನೆಲದಿಂದ ಸಾಮ್ರಾಜ್ಯವಾದ ಕಾಲು ಕೀಳಬೇಕಾಗುವದು ಎಂಬುವದರಲ್ಲಿ ಸಂದೇಹವಿಲ್ಲ.

ಬಂಟ್ವಾಳ :

ಬೀಡಿ ಕೆಲಸಗಾರರ ಸಂಘದ ವಾರ್ಷಿಕ ಮಹಾ ಸಭೆ

6-6-82 ರಂದು ಬಂಟ್ವಾಳದಲ್ಲಿ ಬೀಡಿ ಕೆಲಸಗಾರರ ಸಂಘದ 6ನೇ ವಾರ್ಷಿಕ ಮಹಾಸಭೆ ನಡೆಯಿತು. ಸಂಘದ ಅಧ್ಯಕ್ಷ ಬಿ. ಎಚ್. ಬಂಗೇರ ಅವರು ಅಧ್ಯಕ್ಷತೆ ವಹಿಸಿದ್ದರು.

ಆರಂಭದಲ್ಲಿ ಕಾರ್ಯದರ್ಶಿ ಕಾಂ। ಬಿ. ಸಂಜೀವ ಬಂಗೇರ ಅವರು ಸ್ವಾಗತಿಸಿ, ಗತ ವರ್ಷದ ಚಟುವಟಿಕೆಗಳ ಲಿಖಿತ ವರದಿ ಹಾಗೂ ಲೆಕ್ಕಪತ್ರಗಳನ್ನು ಮಂಡಿಸಿದರು. ಚರ್ಚೆಯ ನಂತರ ತಿದ್ದುಪಡಿಗಳೊಂದಿಗೆ ಅನುಮೋದಿಸಲಾಯಿತು.

ಬೀಡಿ ಕಾರ್ಮಿಕರನ್ನು ಬಾಧಿಸುವ ಹಲವಾರು ಸಮಸ್ಯೆಗಳನ್ನು ಚರ್ಚಿಸಿದ ಸಭೆಯು ಮುಖ್ಯ ನಿರ್ಣಯಗಳನ್ನು ಕೈಗೊಂಡು ಸಂಬಂಧಪಟ್ಟ ಸರಕಾರಿ ಇಲಾಖೆಗಳನ್ನು ಬೀಡಿ ಮಾಲೀಕರನ್ನು ಎಚ್ಚರಿಸಿದೆ.

ರಾಜ್ಯ ಸಮ್ಮೇಳನವು ನೀಡಿದ ಕರೆಯಂತೆ ಜೂನ್ 15ರ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ತಾಲ್ಲೂಕಿನ ಬೀಡಿ ಕಾರ್ಮಿಕರಿಗೆ ಸಭೆ ಕರೆ ನೀಡಿದೆ.

ಮುಖ್ಯ ಅತಿಥಿಗಳಾಗಿ ಕಾಂ। ಕೆ. ಆರ್. ಶ್ರೀಯಾನ್, ಬಿ. ಮಾಧವ, ಯು. ಜನಾರ್ಧನ ನಾಯ್ಕ ಮತ್ತು ಕಾಂ। ವಾಸುಗಟ್ಟಿ ಆಗಮಿಸಿದ್ಧರು.

27 ಜನರ ಕಾರ್ಯಕಾರಿ ಸಮಿತಿಯನ್ನು ಆರಿಸಿ, ಬಿ. ಎಚ್. ಬಂಗೇರ ಅವರನ್ನು ಅಧ್ಯಕ್ಷರನ್ನಾಗಿ, ಬಿ. ಗೋಪಾಲಗೌಡ ಮತ್ತು ಶ್ರೀಮತಿ ಕೃಷ್ಣಮ್ಮ ಇವರನ್ನು ಉಪಾಧ್ಯಕ್ಷರನ್ನಾಗಿ ಚುನಾಯಿಸಿತು. ಕಾರ್ಯದರ್ಶಿಯನ್ನಾಗಿ ಬಿ. ಸಂಜೀವ ಬಂಗೇರ ಅವರನ್ನು, ಪುತ್ತುಮೋನು ಮತ್ತು ಶ್ರೀಮತಿ ಗಿರಿಜ ಇವರನ್ನು ಜೊತೆ ಕಾರ್ಯದರ್ಶಿಗಳಾಗಿ, ಬಿ. ಮಂಜುನಾಥ ಸಾಫಲ್ಯರನ್ನು ಕೋಶಾಧಿಕಾರಿಯನ್ನಾಗಿ ಚುನಾಯಿಸಲಾಗಿದೆ.

●

ಮಾಗಡಿ :

ತಾಲ್ಲೂಕು ರೈತ ಸಂಘದ ಸಮಿತಿ ರಚನೆ

5-6-82 ರಂದು ಮಾಗಡಿ ತಾಲ್ಲೂಕು ರೈತ ಕಾರ್ಯಕರ್ತರ ಸಭೆಯು ನಾಗನಹಳ್ಳಿಯಲ್ಲಿ ನಡೆದು ತಾಲ್ಲೂಕು ಸಮಿತಿಯನ್ನು ರಚನೆ ಮಾಡಲಾಯಿತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ರಾಮದಾಸ್ ಸ್ವಾಮೀಜಿಯವರು ವಹಿಸಿದ್ದರು, ಕಾರ್ಯಕರ್ತರನ್ನುದ್ದೇಶಿಸಿ ಬೆಂಗಳೂರು ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾಂ। ಸಿ. ರಾಮಭದ್ರಯ್ಯನವರು ಮಾತನಾಡುತ್ತಾ ರೈತ ಸಮಸ್ಯೆಗಳ ಪರಿಚಯ ಮಾಡಿಕೊಟ್ಟರು.

ತಾಲ್ಲೂಕು ರೈತ ಸಂಘದ ಸಮಿತಿಗೆ ಶ್ರೀ ನಂಜುಂಡಪ್ಪ ಅಧ್ಯಕ್ಷರಾಗಿ, ಶ್ರೀ ರಾಮದಾಸಸ್ವಾಮಿ ಉಪಾಧ್ಯಕ್ಷರಾಗಿ, ಶ್ರೀ ಜಿ. ಸಿ. ಗಂಗಯ್ಯ ಮತ್ತು ಶ್ರೀ ನರಸಿಂಹಯ್ಯ ಕಾರ್ಯದರ್ಶಿಗಳಾಗಿಯೂ ಮತ್ತು 25 ಜನರ ಕಾರ್ಯಕಾರೀ ಸಮಿತಿ ಸದಸ್ಯರನ್ನು ಚುನಾಯಿಸಲಾಯಿತು.

○

ಕಾಂ। ಸುರ್‌ಜೀತ್‌ರ ಮೇಲೆ ಹಲ್ಲೆಗೆ ಯತ್ನ

ಜೂನ್ 4 ರಂದು ಸಂಜೆ ಸಿ.ಪಿ.ಐ. (ಎಂ) ಜಮ್ಮು ಮತ್ತು ಕಾಶ್ಮೀರ ರಾಜ್ಯ ಘಟಕದ ಸಭೆಯಲ್ಲಿ ಪಾಲ್ಗೊಂಡಿದ್ದ ಪಾಲಿಟ್‌ಬ್ಯೂರೋ ಸದಸ್ಯರೂ, ಸಂಸತ್ ಸದಸ್ಯರೂ ಆಗಿರುವ ಕಾಂ। ಹರೇಕಿಶನ್ ಸಿಂಗ್ ಸುರಜೀತ್‌ರ ಮೇಲೆ ಜಮಾಯತ್-ಎ-ಇಸ್ಲಾಂನ ಹಿಂಬಾಲಕರು ಹಲ್ಲೆ ನಡೆಸಲು ಯತ್ನಿಸಿರುವ ಕಳವಳಕಾರಕ ಘಟನೆ ವರದಿಯಾಗಿದೆ.

ಕಾಂ। ಸುರ್‌ಜೀತ್‌ರನ್ನು ಭೇಟಿಯಾಗಲು ಬಂದಿದ್ದ ಎಸ್.ಎಫ್.ಐ.ನ ಧುರೀಣರನ್ನು ಶಸ್ತ್ರಸಜ್ಜಿತ ಜಮಾಯತ್-ಎ-ಇಸ್ಲಾಂ ಸಂಘಟನೆಯ ಗೂಂಡಾಗಳು ಮಾರಕವಾಗಿ ಥಳಿಸಿದ್ದಾರೆ. ಸಭೆ ಶ್ರೀನಗರದ ಖಾನ್ಯಾರ್ ಎಂಬಲ್ಲಿ ರಾಜ್ಯ ಘಟಕದ ಕಾರ್ಯದರ್ಶಿ ಕಾಂ। ಮುಹಮ್ಮದ್ ಯೂಸುಫ್ ಅವರ ಮನೆಯಲ್ಲಿ ನಡೆಯುತ್ತಿತ್ತು. ಜಮಾಯತ್‌ನ ಮತೀಯವಾದಿ ಗೂಂಡಾಗಳು ಈ ಮನೆ ಮೇಲೆ ಆಕ್ರಮಣ ನಡೆಸಲು ಯತ್ನಿಸಿದರು. ಕಮ್ಯೂನಿಸಂನ ವಿರುದ್ಧ ಅಸಹ್ಯಕರ ಘೋಷಣೆಗಳನ್ನು ಕೂಗುತ್ತಿದ್ದರು. ಆರಂಭದಲ್ಲಿ ಗಮನ ಹರಿಸದ ಪೋಲೀಸ್ ಇಲಾಖೆ ಸಭೆಯಲ್ಲಿ ಕಾಂ। ಸುರ್‌ಜೀತ್ ಇದ್ದುದು ಗೊತ್ತಾದ ನಂತರ ಧಾವಿಸಿ ಅವರಿಗೆ ರಕ್ಷಣೆ ಒದಗಿಸಿದ್ದಾರೆ. ಈ ಗೂಂಡಾಗಳ ವಿರುದ್ಧ ಕೇಸ್ ದಾಖಲು ಮಾಡಿಕೊಳ್ಳದ ಹೊರತು ಮತ್ತು ಆಸ್ಪತ್ರೆಗೆ ಸೇರಿಸಿದ್ದ ವಿದ್ಯಾರ್ಥಿಗಳ ಕುರಿತು ಮಾಹಿತಿ ತಿಳಿಯುವವರೆಗೆ ಜಾಗಬಿಟ್ಟು ಕದಲಲು ಕಾಂ। ಸುರ್‌ಜೀತ್ ನಿರಾಕರಿಸಿದ್ದರು.

ಸೌದೀ ಅರೇಬಿಯಾದಿಂದ ಪ್ರವಹಿಸುತ್ತಿರುವ ದುಡ್ಡಿನ ಬಲದಿಂದ ಕೊಬ್ಬಿದ ಮುಸ್ಲಿಂ ಮತೀಯವಾದಿಗಳು ರಾಜ್ಯದಲ್ಲಿ ಛಿದ್ರಕಾರಿ ಚಟುವಟಿಕೆಗಳನ್ನ ತೀವ್ರಗೊಳಿಸಿದ್ದಾರೆ. ಸಿ.ಪಿ.ಐ.(ಎಂ)ನ ಮೇಲೆ ಕೆಂಡಕಾರುತ್ತಿದ್ದಾರೆ. ಕಳೆದ ತಿಂಗಳು ತಾನೇ ಪಕ್ಷದ ರಾಜ್ಯ ಘಟಕದ ಕಾರ್ಯದರ್ಶಿ ಕಾಂ॥ ಮುಹಮ್ಮದ್ ಯೂಸೂಫ್‌ರ ಮೇಲೆ ಹಲ್ಲೆ ನಡೆದಿತ್ತು.

ಜಮ್ಮು ಮತ್ತು ಕಾಶ್ಮೀರದ ಜಾತ್ಯಾತೀತ ಶಕ್ತಿಗಳು, ಪ್ರಜಾಪ್ರಭುತ್ವವಾದಿಗಳು ಕಾಂ। ಸುರಜೀತ್‌ರ ಮೇಲೆ ಹಲ್ಲೆಗೆ ಯತ್ನಿಸಿರುವ ಘಟನೆಯನ್ನು ತೀವ್ರವಾಗಿ ಖಂಡಿಸಿದ್ದಾರೆ.

●

ಅಂತರರಾಷ್ಟ್ರೀಯ ಕಾರ್ಮಿಕ ಮಹಾ ನಾಯಕ

(2ನೇ ಪುಟದಿಂದ)

ಅಂತರರಾಷ್ಟ್ರೀಯತೆ

ಅಂತರರಾಷ್ಟ್ರೀಯತೆಯಲ್ಲಿ ಪ್ರಭಲ ನಂಬಿಕೆಯಿದ್ದ ದಿಮಿತ್ರೋವ್ 1914ರ ಸಾಮ್ರಾಜ್ಯಶಾಹಿ ಯುದ್ಧವನ್ನು ತೀವ್ರವಾಗಿ ವಿರೋಧಿಸಿ ಕಾರ್ಮಿಕರು ಈ ಯುದ್ಧದಲ್ಲಿ ಭಾಗವಹಿಸದಂತೆ ಕೋರಿ ಕರಪತ್ರ ಹೊರಡಿಸಿದರು. ರಷ್ಯದ ಸಮಾಜವಾದಿ ಕ್ರಾಂತಿಯು ಕಾರ್ಮಿಕ ಅಂತರರಾಷ್ಟ್ರೀಯತೆಗೆ ಹೊಸ ತಿರುವನ್ನು ನೀಡಿತು. ಅಂತರರಾಷ್ಟ್ರೀಯ ಮಟ್ಟದಲ್ಲಿ ಕೇವಲ ಪರಸ್ಪರ ಸಹಕಾರಗಳಲ್ಲಿ ತೃಪ್ತಿಪಡದೆ ಸಾಮ್ರಾಜ್ಯಶಾಹಿ ಧಾಳಿಯಿಂದ ರಷ್ಯದ ಯಶಸ್ವಿ ಸಮಾಜವಾದಿ ಕ್ರಾಂತಿಯನ್ನು ರಕ್ಷಿಸುವ ಹೊಣೆಯು ಅಂತರರಾಷ್ಟ್ರೀಯ ಕಾರ್ಮಿಕರ ಮೇಲಿದೆ.

ಅಕ್ಟೋಬರ್ ಕ್ರಾಂತಿಯ ಮಹತ್ವವನ್ನು ಅರ್ಥಮಾಡಿಕೊಂಡ ಈ ಮಹಾನ್ ಹೋರಾಟಗಾರ ಮಾನವ ಕುಲದ, ದುಡಿಯುವ ಜನತೆಯ ಭವಿಷ್ಯ ಲೆನಿನ್ ನಾಯಕತ್ವದಲ್ಲಿ ರೂಪುಗೊಂಡ ಈ ಕಾರ್ಮಿಕ ರಾಜ್ಯದ ಅಸ್ತಿತ್ವ ಪ್ರಗತಿ ಮತ್ತು ಬಲಗೊಳ್ಳುವಿಕೆಯೊಂದಿಗೆ ನೇರವಾಗಿ ಸಂಬಂಧಿಸಿದೆಯೆಂದು ಮನಗಂಡರು. ಈ ರಾಜ್ಯದ ಬಗೆಗಿನ ಧೋರಣೆಯು ಅಂತರರಾಷ್ಟ್ರೀಯತೆಗೊಂದು ಮಾನದಂಡವಾಗುತ್ತದೆ ಎಂದಿದ್ದಾರೆ.

ಒಡಕು ಧ್ವನಿ

ಆದರೆ ಅನೇಕ ಕಮ್ಯುನಿಸ್ಟ್ ಪಕ್ಷಗಳು ದಿಮಿತ್ರೋವ್‌ರವರ ನಿಲುವನ್ನು ಕಡೆಗಾಣಿಸಿವೆ. ವಾರ್ಸಾ ಯುದ್ಧ ಕೌಲು ಮತ್ತು ನ್ಯಾಟೋ ಯುದ್ಧ ಕೌಲುಗಳಲ್ಲಿ ಯಾವುದೇ ವ್ಯತ್ಯಾಸವನ್ನು ಇವುಗಳು ಕಾಣುತ್ತಿಲ್ಲ. ಸಾಮ್ರಾಜ್ಯಶಾಹಿಗಳಿಂದ ಒಂದು ರಾಷ್ಟ್ರದ ಪರಮಾಧಿಕಾರವನ್ನು ರಕ್ಷಿಸಲು ಸಮಾಜವಾದಿ ಮಧ್ಯಸ್ಥಿಕೆಯನ್ನು ಇವು ವಿರೋಧಿಸುತ್ತಿವೆ. ರಷ್ಯದ ಶಾಂತಿಗಾಗಿನ ಹೋರಾಟವನ್ನು ಮತ್ತು ಅಮೆರಿಕದ ಯುದ್ಧಕೋರ ಪ್ರಯತ್ನಗಳನ್ನು ಒಂದಾಗಿ ಬಗೆಯುತ್ತಿವೆ. ಕೆಲವು ಪಕ್ಷಗಳು ಕಾರ್ಮಿಕ ಅಂತರರಾಷ್ಟ್ರೀಯತೆಯ ಯತಾರ್ಥತೆಯ ಬಗ್ಗೆ ಬಹಿರಂಗವಾಗಿ ಸಂದೇಹಿಸಿ ಅದನ್ನು "ಮಾನವೀಯ ಭ್ರಾತೃತ್ವಕ್ಕೆ ಇಳಿಸುತ್ತಿವೆ." ಇನ್ನು ಕೆಲವು ಪಕ್ಷಗಳು ಸಮಾಜವಾದಿ ದೇಶಗಳನ್ನು ಅವುಗಳು ಸಾಮ್ರಾಜ್ಯಶಾಹಿ ಅಥವಾ ಫ್ಯಾಸಿಸ್ಟ್ ದೇಶಗಳೋ ಎಂಬಂತೆ ಟೀಕಿಸುತ್ತಿವೆ.

ಇದರ ಅರ್ಥ ಜಾಗತಿಕ ಕಮ್ಯುನಿಸ್ಟ್ ಚಳುವಳಿಯ ಹೆಚ್ಚು ಭಾಗ ಮಾರ್ಕ್ಸ್‌ವಾದಿ - ಲೆನಿನ್‌ವಾದಿ ತತ್ವವಾದ ಕಾರ್ಮಿಕ ಅಂತರರಾಷ್ಟ್ರೀಯತೆಗೆ ಬದ್ಧವಾಗಿಲ್ಲವೆಂದಲ್ಲ. ಆದರೆ ಈ ಸುಧಾರಣಾವಾದಿ ನಿಲುವಿನಿಂದಾಗಿ ಅಪಾಯಕಾರಿ ಪರಿಸ್ಥಿತಿಯುಂಟಾಗಿದೆ. ಯಶಸ್ವಿ ಸಮಾಜವಾದಿ ಕ್ರಾಂತಿಗಾಗಿ ಅಂತರರಾಷ್ಟ್ರೀಯ ಸಹಕಾರ' ಪ್ರತಿಪಾದಿಸಿದ ದಿಮಿತ್ರೋರವರ ವಿಚಾರವನ್ನು ಇಂದು ತೀವ್ರವಾಗಿ ಪರಿಗಣಿಸಬೇಕಾಗಿದೆ.

ಕಾಲದ ಕರೆ

ಇಡೀ ವಿಶ್ವವನ್ನು ನಾಶಗೊಳಿಸುವತ್ತ ಪ್ರಯತ್ನಿಸುತ್ತಿರುವ ಅಮೆರಿಕನ್ ಸಾಮ್ರಾಜ್ಯಶಾಹಿ ವಿರುದ್ಧ ಎಲ್ಲರೂ ಒಂದಾಗುವಂತೆ, ಸಮಾಜವಾದಿ ಬಣದ ರಕ್ಷಣೆಗೆ ಅಚಲವಾಗಿ ನಿಲ್ಲುವಂತೆ, ಹೊಸದಾಗಿ ವಿಮೋಚನೆಗೊಂಡ ರಾಷ್ಟ್ರಗಳ ಸ್ವಾತಂತ್ರ್ಯವನ್ನು ರಕ್ಷಿಸುವಂತೆ ಮತ್ತು ಅಲಿಪ್ತ ರಾಷ್ಟ್ರ ಚಳುವಳಿಯನ್ನು ಬಲಪಡಿಸುವಂತೆ ಕಾರ್ಮಿಕ ಅಂತರರಾಷ್ಟ್ರೀಯತೆಯು ಕರೆ ನೀಡುತ್ತದೆ.

ದಿಮಿತ್ರೋವ್‌ರವರು ಅಂತರರಾಷ್ಟ್ರೀಯ ಐಕ್ಯತೆ ಬಗ್ಗೆ ಕೇವಲ ಉಪದೇಶ ನೀಡದೆ ಅದನ್ನು ಕಟ್ಟುವಲ್ಲಿ ಖಚಿತ ಕಾರ್ಯಕ್ರಮಗಳನ್ನು ಸೂಚಿಸಿದರು. ಎರಡು ಅಂತರರಾಷ್ಟ್ರೀಯ ಕಾರ್ಮಿಕ ಸಂಘಗಳ ಫೆಡರೇಷನ್‌ಗಳನ್ನು ಒಂದುಗೂಡಿಸಲು ಮುಂದಾದರು. ಈ ಯೋಜನೆ ಕಾರ್ಯಗತವಾಗಿದ್ದರೆ ಯುದ್ಧಕೋರರ ತಂತ್ರಗಳನ್ನು ವಿಫಲಗೊಳಿಸಬಹುದಾಗಿತ್ತು.

ಸುಧಾರಣಾವಾದಿಗಳ ವಿಶ್ವಾಸದ್ರೋಹದಿಂದ ಧೃತಿಗೆಡದೆ ಕಮ್ಯುನಿಸ್ಟ್ ಪಕ್ಷಗಳ ಎಲ್ಲ ಶಕ್ತಿಯನ್ನು ಸಾಮ್ರಾಜ್ಯಶಾಹಿ ಯುದ್ಧದ ವಿರುದ್ಧ ಕ್ರೋಢಿಕರಿಸಿದರು. ಹಿಟ್ಲರನ ಆಕ್ರಮಣಕಾರಿ ಶಕ್ತಿಗಳು ಸೋವಿಯತ್ ದೇಶದ ಮೇಲೆ ಧಾಳಿ ಮಾಡಿದಾಗ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್ ಮೂಲಕ ಅಂತರರಾಷ್ಟ್ರೀಯ ಕಾರ್ಮಿಕರು ಸೋವಿಯತ್ ಯೂನಿಯನ್ ರಕ್ಷಣೆಗೆ ಧಾವಿಸುವಂತೆ ಮಾಡಿದರು.

ಮತ್ತೊಮ್ಮೆ ದಿಮಿತ್ರೋವ್‌ರವರಿಗೆ ಪರೀಕ್ಷಾ ಸಮಯವೊದಗಿತು. ರಷ್ಯಾದ ಮೇಲಿನ ಧಾಳಿ, ಯುರೋಪಿನ ಹಲವಾರು ರಾಷ್ಟ್ರಗಳ ಮೇಲೆ ನಾಝಿಗಳ ಹಿಡಿತ ಮುಂತಾದವುಗಳಿಂದಾಗಿ ಕ್ರಾಂತಿಕಾರಿ ಚಳುವಳಿಗೆ ಏಕ ಕೇಂದ್ರದಿಂದ ನಿರ್ದೇಶನ ನೀಡುವುದು ಅಸಾಧ್ಯವಾಯಿತು. ವಿವಿಧ ಕಮ್ಯುನಿಸ್ಟ್ ಪಕ್ಷಗಳು ಭಿನ್ನವಾದ ಪರಿಸ್ಥಿತಿಯನ್ನು ಎದುರಿಸುತ್ತಿದ್ದವು. ಸ್ಥಳೀಯವಾದ ಪರಿಸ್ಥಿತಿಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಲು ಅನುಕೂಲವಾಗುವಂತೆ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್ ವಿಸರ್ಜಿಸಲಾಯಿತು. ಇದರಿಂದಾಗಿ ಕಾರ್ಮಿಕ ಅಂತರರಾಷ್ಟ್ರೀಯತೆಯ ಮೂರ್ತರೂಪ ಕೊನೆಗೊಂಡಂತೆ ಕಂಡರೂ ಎಲ್ಲ ಕಮ್ಯುನಿಸ್ಟ್ ಪಕ್ಷಗಳೂ ಸ್ಥಳೀಯವಾಗಿ ಪರಿಸ್ಥಿತಿಯನ್ನು ವಿವೇಚಿಸಿ ಪೂರ್ಣ ಪ್ರಮಾಣದಲ್ಲಿ ಫ್ಯಾಸಿಸ್ಟ್ ವಿರೋಧಿ ಹೋರಾಟದಲ್ಲಿ ಭಾಗವಹಿಸಲು ಅನುವಾಯಿತು. ಚರಿತ್ರೆಯ ಮುಂದಿನ ಬೆಳವಣಿಗೆಗಳು ಈ ಅಂಶವನ್ನು ಸಮರ್ಥಿಸುತ್ತವೆ.

ಏಕ ಶಿಲೆಯಂತಿದ್ದ, ಒಂದೇ ಉದ್ದೇಶ ಒಂದೇ ಮನಸ್ಸನ್ನು ಹೊಂದಿದ್ದ ಮತ್ತು ಶಿಸ್ತಿನ ಸೈನ್ಯದಂತಿದ್ದ ಜಾಗತಿಕ ಕಮ್ಯುನಿಸ್ಟ್ ಚಳುವಳಿಯು ದಿಮಿತ್ರೋವ್ ಕಾಲದಲ್ಲಿ ಅಪಾರ ಯಶಸ್ಸು ಗಳಿಸಿತು. ಆದರೆ ಇಂದು ಅಂತಹ ಪರಿಸ್ಥಿತಿಯಿಂದ ದೂರವಿದ್ದೇವೆ. ದಿಮಿತ್ರೋವ್‌ರವರ ನೆನಪು, ವಿಚಾರಗಳು ಕಮ್ಯುನಿಸ್ಟ್ ಚಳುವಳಿಯನ್ನು ಆ ದಿಕ್ಕಿನಲ್ಲಿ ಕೊಂಡೊಯ್ಯುವಂತೆ ಪ್ರೇರೇಪಿಸಬೇಕಾಗಿದೆ.

●

ರಾಜಸ್ಥಾನ ವಿದ್ಯುಚ್ಛಕ್ತಿ ಇಲಾಖೆಯ ನೌಕರರ ಮೇಲೆ ದಬ್ಬಾಳಿಕೆಯ ಖಂಡನೆ

ತಮ್ಮ ನ್ಯಾಯಯುತ ಬೇಡಿಕೆಗಳಿಗೋಸ್ಕರ ಹೋರಾಡುತ್ತಿರುವ ರಾಜಸ್ಥಾನ ವಿದ್ಯುಚ್ಛಕ್ತಿ ಇಲಾಖೆಯ ನೌಕರರ ಮೇಲೆ ರಾಜ್ಯ ಸರಕಾರ ನಡೆಸಿರುವ ದಬ್ಬಾಳಿಕೆಯನ್ನು ಸಿ. ಐ. ಟಿ. ಯು. ಅಧ್ಯಕ್ಷ ಕಾಂ| ಬಿ.ಟಿ.ರಣದಿವೆ ಅವರು ತೀವ್ರವಾಗಿ ಖಂಡಿಸಿದ್ದಾರೆ. ಕಾಂ| ಬಿ.ಟಿ ಆರ್. ಈ ಕುರಿತು ಪತ್ರಿಕಾ ಹೇಳಿಕೆಯೊಂದನ್ನು ಬಿಡುಗಡೆ ಮಾಡಿದ್ದಾರೆ.

ಸಹಸ್ರಾರು ಸಂಖ್ಯೆಯಲ್ಲಿ ನೌಕರರನ್ನು ಬಂಧಿಸಿರುವುದಲ್ಲದೇ, ಸುಮಾರು 40,000 ನೌಕರರನ್ನು ಡಿಸ್‌ಮಿಸ್ ಮಾಡುವ ಬೆದರಿಕೆ ಹಾಕಲಾಗಿದೆ. ನ್ಯಾಯಯುತ ಬೇಡಿಕೆಗಳಿಗೋಸ್ಕರ ನಡೆಯುತ್ತಿರುವ ಹೋರಾಟವನ್ನು ತೀವ್ರ ದಬ್ಬಾಳಿಕೆಯಿಂದ ಹತ್ತಿಕ್ಕುತ್ತಿರುವುದು ಬ್ರಿಟೀಷರ ಆಳ್ವಿಕೆಯ ದಿನಗಳನ್ನು ನೆನಪಿಗೆ ತರುವಂತಾಗಿದೆ ಎಂದು ಕಾಂ|| ಬಿ. ಟಿ. ಆರ್. ತಿಳಿಸಿದ್ದಾರೆ. ರಾಜಸ್ಥಾನ ವಿದ್ಯುಚ್ಛಕ್ತಿ ಮಂಡಳಿಯು ಹೋರಾಟ ಹತ್ತಿಕ್ಕುವ ಮಾರ್ಗವನ್ನು ಕೈಬಿಟ್ಟು ಕ್ರಿಯಾಸಮಿತಿಯೊಂದಿಗೆ ಮಾತುಕತೆಗೆ ಮುಂದಾಗಲೆಂದು ಕಾಂ| ಬಿ. ಟಿ. ಆರ್. ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಅಪೂರ್ವ ಐಕ್ಯತೆಯಿಂದ ಹೋರಾಟ ಮುಂದುವರಿಸಿರುವ ನೌಕರರನ್ನು ಅಭಿನಂದಿಸಿರುವ ಕಾಂ|| ಬಿ. ಟಿ. ಆರ್., ಎಲ್ಲ ಕಾರ್ಮಿಕ ಸಂಘಟನೆಗಳು ಈ ಹೋರಾಟವನ್ನು ಬೆಂಬಲಿಸಬೇಕೆಂದು ಮನವಿ ಮಾಡಿದ್ದಾರೆ.

○

ಪ್ರಾಂತ ರೈತ ಸಂಘದ ತೀರ್ಮಾನ

ದಶಲಕ್ಷ ಸಹಿ ಸಂಗ್ರಹ ಕಾರ್ಯಕ್ರಮ

ರೈತರ ಬೇಡಿಕೆಗಳನ್ನು ಕೊನೆಯದ್ದಾಗಿ ಸರಕಾರದ ಮುಂದಿಡಲು ಮತ್ತು ಗಡುವು ನೀಡಿ ಸರಕಾರ ಮನ್ನಿಸದೇ ಹೋದಲ್ಲಿ ರೈತರು ದೊಡ್ಡ ರೀತಿಯಲ್ಲಿ ಹೋರಾಟಕ್ಕೆ ಇಳಿಯುವಂತಾಗಲು ಅಂತಿಮ ಮಹಾಮನವಿಗೆ ದಶಲಕ್ಷ ಸಹಿ ಸಂಗ್ರಹಿಸುವ ಕಾರ್ಯಕ್ರಮವನ್ನು ಪ್ರಾಂತ ರೈತ ಸಂಘ ಹಾಕಿಕೊಂಡಿದೆ. ಕಳೆದ ತಿಂಗಳು ಬೆಂಗಳೂರಿನಲ್ಲಿ ನಡೆದ ಪ್ರಾಂತ ರೈತ ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

ರೈತ ಹೋರಾಟವನ್ನು ತೀವ್ರವಾಗಿ, ವಿಶಾಲವಾಗಿ ಕಟ್ಟಿಬೆಳೆಸಲು, ಸರಕಾರದ ರೈತ ವಿರೋಧಿ ಕ್ರಮಗಳನ್ನು ರೈತರು ವಿರೋಧಿಸಿ ಹೋರಾಟಕ್ಕೆ ಸನ್ನದ್ಧರಾಗಬೇಕಾಗಿದೆ; ಸಮಸ್ಯೆಗಳ ಆಧಾರದ ರೈತ-ರೈತ ಕೂಲಿಕಾರರೆಲ್ಲ ಕೂಡಿ ಹೋರಾಡುವುದು ಅತ್ಯವಶ್ಯ ಎಂದು ಪ್ರಾಂತ ರೈತ ಸಂಘ ತಿಳಿಸಿದೆ.

ಆಗಸ್ಟ್ ಮೊದಲ ವಾರದಲ್ಲಿ ದಶಲಕ್ಷ ಸಹಿ ಸಂಗ್ರಹದ ಅಂತಿಮ ಮಹಾಮನವಿಯನ್ನು ಸಹಸ್ರಾರು ಸಂಖ್ಯೆಯಲ್ಲಿ ರೈತರು ರಾಜಧಾನಿಗೆ ದೌಡು ಬಂದು ಸರಕಾರಕ್ಕೆ ಅರ್ಪಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ.

○

ಸಾಣಿಕೊಪ್ಪ :

ರೈತ ಸಂಘದ ಘಟಕ ಸ್ಥಾಪನೆ

ಇತ್ತೀಚೆಗೆ ಬೈಲಹೊಂಗಲ ತಾಲ್ಲೂಕಿನ (ಬೆಳಗಾಂ ಜಿಲ್ಲೆ) ಸಾಣಿಕೊಪ್ಪ ಗ್ರಾಮದಲ್ಲಿ ಪ್ರಾಂತ ರೈತ ಸಂಘದ ಉದ್ಘಾಟನೆಯನ್ನು ಜಿಲ್ಲಾ ಸಂಚಾಲಕ ನಿತ್ಯಾನಂದಜಿ ಅವರು ನೆರವೇರಿಸಿದರು. ಈ ಕೆಳಕಂಡವರನ್ನು ಪದಾಧಿಕಾರಿಗಳನ್ನಾಗಿ ಚುನಾಯಿಸಲಾಗಿದೆ :

ಅಧ್ಯಕ್ಷರಾಗಿ ವೀರಭದ್ರಯ್ಯ ಚಿಕ್ಕಮಠ, ಉಪಾಧ್ಯಕ್ಷರಾಗಿ ಶಿವಪ್ಪ ಪೂಜೇರ, ಕಾರ್ಯದರ್ಶಿಯಾಗಿ ಬಸಲಿಂಗಪ್ಪ ಡೊಳ್ಳಿನ, ಉಪ ಕಾರ್ಯದರ್ಶಿಯಾಗಿ ಬಸಲಿಂಗಯ್ಯ ಮರಕುಂಬಿಮಠ ಹಾಗೂ 18 ಜನ ಕಾರ್ಯಕಾರಿ ಮಂಡಳಿಯನ್ನೂ ಚುನಾಯಿಸಲಾಯಿತು.

24-5 82 ರಂದು ತಾಲ್ಲೂಕು ಸಂಚಾಲಕ ನೆಲ್ಲಿಗಣಿ ಅವರ ನೇತೃತ್ವದಲ್ಲಿ ಸಾಣಿಕೊಪ್ಪ ಗ್ರಾಮದಿಂದ ಬೈಲಹೊಂಗಲಕ್ಕೆ ಕಾಲ್ನಡಿಗೆಯಿಂದ ಜಾಥಾದಲ್ಲಿ ತಹಶೀಲ್ದಾರರ ಆಫೀಸಿಗೆ ತೆರಳಿ ರೈತ ಸಂಘದ 22 ಬೇಡಿಕೆಗಳನ್ನು ಮತ್ತು ಸಾಣಿಕೊಪ್ಪ ಗ್ರಾಮದ 10 ಬೇಡಿಕೆಗಳ ಮನವಿಯನ್ನು ಸಲ್ಲಿಸಲಾಗಿದೆ.

ಇತ್ತೀಚೆಗೆ ಆರಂಭವಾಗಿರುವ ಸಾಣಿಕೊಪ್ಪದ ರೈತ ಸಂಘದ ಘಟಕ ಉತ್ಸಾಹದಿಂದ ಕಾರ್ಯ ನಿರ್ವಹಿಸುತ್ತಿದೆ.

●

ಗಂಗಾವತಿ :

ಯಶಸ್ವಿಯಾದ ದಲಿತರ ಹೋರಾಟ

ಅಶುದ್ಧ ನೀರು ಕುಡಿದು ರೋಗದಿಂದ ಬಳಲುತ್ತಿರುವ ಹಳ್ಳಿ ಜನರಿಗೆ ಶುದ್ಧ ನೀರು ಒದಗಿಸಬೇಕು; ದಲಿತರ ಹೆಸರಿನಲ್ಲಿ ಕಟ್ಟಿದ ಜನತಾ ಮನೆಗಳನ್ನು ಮೇಲ್ವರ್ಗದವರು ಲಪಟಾಯಿಸಿದ್ದನ್ನು ಮರಳಿ ಕೊಡಬೇಕು; ಮನೆ ಇಲ್ಲದ ದಲಿತರಿಗೆ ನಿವೇಶನಗಳ ಸರಿಯಾದ ಹಂಚಿಕೆಯಾಗಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು ಗಂಗಾವತಿ ತಾಲ್ಲೂಕಿನ ದಲಿತರ ದಲಿತ ಸಂಘರ್ಷ ಸಮಿತಿಯ ನೇತೃತ್ವದಲ್ಲಿ 3-4-82 ರಿಂದ ಗಂಗಾವತಿಯ ತಹಸೀಲ್‌ದಾರ್ ಆಫೀಸೆದುರು ಉಪವಾಸ ಸತ್ಯಾಗ್ರಹ ಹೂಡಲಾಗಿತ್ತು. ಸುಮಾರು 12 ಹಳ್ಳಿಗಳಲ್ಲಿಯ ತಾಲ್ಲೂಕು ಸಮಿತಿಯ ಉಪಸಮಿತಿಗಳು ನಿರಂತರ ಶ್ರಮವಹಿಸಿ ಸರದಿ ಉಪವಾಸ ಸತ್ಯಾಗ್ರಹದಲ್ಲಿ ನೂರಾರು ಸಂಖ್ಯೆಯಲ್ಲಿ ದಲಿತರು ಭಾಗವಹಿಸುವಂತೆ ಮಾಡಿದ್ದವು. 10-5-82 ರಂದು ಹಳ್ಳಿಯ ಮಹಿಳೆಯರು ಗಂಗಾವತಿಯಲ್ಲಿ ಬರಿಕೊಡ ಮೆರವಣಿಗೆ ನಡೆಸಿದ್ದರು. ನೀರು ಸರಬರಾಜು ಮಾಡುವುದಾಗಿ ಆಶ್ವಾಸನೆ ನೀಡಿದ್ದ ಅಧಿಕಾರಿಗಳು ತಮ್ಮ ಆಶ್ವಾಸನೆಯಿಂದ ವಿಮುಖರಾದರು. 25-5-82 ರಂದು ಕಡಿಮೆ ದರದ ಮನೆಗೆ ಸೌಲಭ್ಯ, ಜನತಾ ಮನೆಗಳ ಹಂಚಿಕೆಯಲ್ಲಾದ ಭ್ರಷ್ಟಾಚಾರದ ಕುರಿತು ಸುಮಾರು ಸಾವಿರ ದಲಿತರು ಬಿ.ಡಿ.ಓ. ಆಫೀಸನ್ನು ಘೇರಾಯಿಸಿದ್ದರು. ವಿಷಯ ತಿಳಿದ ಜಿಲ್ಲಾಧಿಕಾರಿಗಳು ರಾಯಚೂರಿನಿಂದ ಧಾವಿಸಿ ಬಂದು ಬೇಡಿಕೆಗಳನ್ನು ಈಡೇರಿಸುವುದಾಗಿ ಆಶ್ವಾಸನೆ ನೀಡಿ ಹೋರಾಟ ಹಿಂತೆಗೆಯುವಂತೆ ಮಾಡಿದ ಮನವಿ ನಿರಾಕರಿಸಲ್ಪಟ್ಟಿತು.

ಹೋರಾಟದ 35ನೇ ದಿನ ಸಹಸ್ರಾರು ಸಂಖ್ಯೆಯಲ್ಲಿ ದಲಿತರು ಕೆಂಬಾವುಟದೊಂದಿಗೆ ಮೆರವಣಿಗೆಯಲ್ಲಿ ಗಂಗಾವತಿಗೆ ಆಗಮಿಸಿ ತಹಸೀಲ್‌ದಾರ್ ಆಫೀಸಿಗೆ ಮುತ್ತಿಗೆ ಹಾಕಿದರು. ಪೋಲಿಸ್ ಪಡೆ ಆಗಮಿಸಿ ಲಾಠೀ ಚಾರ್ಜ್ ಮಾಡಿದ್ದರ ಪರಿಣಾಮವಾಗಿ ಅನೇಕರು ಗಾಯಗೊಂಡರು. ಆದರೂ ದಲಿತರು ಹಿಂಜಗ್ಗದೇ ಇದ್ದಾಗ ಪರಿಸ್ಥಿತಿ ವಿಕೋಪಕ್ಕೆ ತಿರುಗೀತೆಂಬ ಭಯದಿಂದ ಎ.ಸಿ. ಹಾಗೂ ಡಿ. ವೈ. ಎಸ್. ಪಿ. ಇವರುಗಳು ಮಧ್ಯ ಪ್ರವೇಶಿಸಿ ಲಾಠೀ ಪ್ರಹಾರ ನಿಲ್ಲಿಸಿ ರಾಜಿಗೆ ಯತ್ನಿಸಿದರು.

ಒಂದು ತಿಂಗಳ ಅವಧಿಯಲ್ಲಿ ಎಲ್ಲ ಬೇಡಿಕೆಗಳನ್ನೂ ಈಡೇರಿಸುವುದಾಗಿ ಎ.ಸಿ.ಯವರು ಲಿಖಿತ ಭರವಸೆ ನೀಡಿದ ಮೇಲೆ ಹೋರಾಟ ಹಿಂತೆಗೆಯಲ್ಪಟ್ಟಿದೆ.

ಈ ಆಶ್ವಾಸನೆಯೂ ವಿಫಲವಾದಲ್ಲಿ ತೀವ್ರ ಪರಿಣಾಮ ಎದುರಿಸಬೇಕಾದೀತೆಂದು ಎಚ್ಚರಿಸಿರುವ ದ. ಸಂ. ಸ. ತಾಲ್ಲೂಕು ಸಂಚಾಲಕ ಭಾಗ್ಯವಂತ ಅವರು, ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ ದಲಿತ ಬಾಂಧವರನ್ನು ಅಭಿನಂದಿಸಿದ್ದಾರೆ.

○

ಜನರ ಸಮಸ್ಯೆಗಳ ಪರಿಹಾರಕ್ಕೆ ಹೋರಾಡಲು ಕರೆ

(1ನೇ ಪುಟದಿಂದ)

3. ರೈತರಂಗದಲ್ಲಿ ಪ್ರಗತಿಪರವಾದ ಭೂಸುಧಾರಣೆ ಜಾರಿಯಾಗಬೇಕು. ಅಕ್ಕಿ, ಜೋಳ, ರಾಗಿ, ಅರಳೆ, ತಂಬಾಕು, ಕಬ್ಬು ಇತ್ಯಾದಿ ಕೃಷ್ಯುತ್ಪನ್ನಗಳಿಗೆ ಯೋಗ್ಯ ಬೆಲೆ ಸಿಗಬೇಕು. ಸರ್ಕಾರ ಉತ್ಪನ್ನಗಳನ್ನು ಈ ಬೆಲೆಗೆ ಕೊಂಡು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ನಿಗದಿಯಾದ ಬೆಲೆಗಳಲ್ಲಿ ಮಾರಾಟಮಾಡಬೇಕು. ರೈತರು ಬಳಸುವ ಉಪಕರಣಗಳನ್ನು ಕಡಿಮೆ ಬೆಲೆಗಳಿಗೆ ಅವರಿಗೆ ಒದಗಿಸುವ ವ್ಯವಸ್ಥೆ ಮಾಡಬೇಕು. ಬಡರೈತರ ಮೇಲಿರುವ ಸಾಲದ ಹೊರೆಯನ್ನು ರದ್ದು ಮಾಡಬೇಕು. ಹೆಚ್ಚುವರಿ ಮತ್ತು ಕೃಷಿಯೋಗ್ಯ ಸರ್ಕಾರಿ ಭೂಮಿಯನ್ನು ಭೂಹೀನ ರೈತರಿಗೆ ಹಂಚಬೇಕು. ಕೃಷಿಭೂಮಿಗಳಲ್ಲಿ ಮನೆ ಕಟ್ಟಲು ಇರುವ ನಿಷೇಧವನ್ನು ರದ್ದು ಮಾಡಬೇಕು. ಸರ್ಕಾರಿ ಭೂಮಿಯ ಅನಧಿಕೃತ ಸಾಗುವಳಿದಾರರಿಗೆ ಆ ಭೂಮಿಗಳ ಪಟ್ಟಾ ಕೊಡಬೇಕು.

4. ರಾಜ್ಯದಲ್ಲಿ ನೀರಾವರಿ ವ್ಯವಸ್ಥೆ ಉತ್ತಮಗೊಳ್ಳಬೇಕು. ಹಾರಂಗಿ, ಕಬಿನಿ, ಕೃಷ್ಣಾ, ಮೇಲ್ದಂಡೆ, ಕಾರಂಜ ಇತ್ಯಾದಿ ಯೋಜನೆಗಳನ್ನು ಕೂಡಲೇ ಜಾರಿಗೆ ತರಬೇಕು.

5. ಕೃಷಿ ಕಾರ್ಮಿಕರಿಗೆ ಕನಿಷ್ಠ ಪಕ್ಷ ದಿನವೊಂದಕ್ಕೆ ತರಿ ಭೂಮಿಯಲ್ಲಿ 15 ರೂ. ಮತ್ತು ಖುಷ್ಕಿ ಭೂಮಿಯಲ್ಲಿ 10 ರೂ. ಕೂಲಿ ಸಿಗಬೇಕು. ಕೃಷಿ ಕಾರ್ಮಿಕರ ಜೀವನವನ್ನು ಸುಧಾರಿಸುವಂಥ ಯೋಜನೆ ಜಾರಿಯಾಗಬೇಕು.

6. ಗುಲ್ಬರ್ಗ, ಬೀದರ್, ರಾಯಚೂರು, ಬಿಜಾಪುರ, ಚಿತ್ರದುರ್ಗ, ಕೋಲಾರ ಮುಂತಾದ ಬರಗಾಲ ಪೀಡಿತ ಪ್ರದೇಶಗಳಲ್ಲಿ ಕ್ಷಾಮಡಾಮರಗಳನ್ನು ತಡೆಗಟ್ಟುವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು.

7. ನಿರುದ್ಯೋಗದ ವಿರುದ್ಧ, ಉಸಿದ ಹಕ್ಕು–ಮೂಲಭೂತ ಹಕ್ಕಾಗಿ ಘೋಷಿಸಬೇಕು, ಕೆಲಸ ಅಥವಾ ನಿರುದ್ಯೋಗ ಭತ್ಯವನ್ನು ಸರ್ಕಾರ ಕೊಡಬೇಕು.

8. ಶಿಕ್ಷಣ ಕ್ಷೇತ್ರದಲ್ಲಿ ತುರ್ತಿನ ಸುಧಾರಣೆಯಾಗಬೇಕು. ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ರಾಷ್ಟ್ರೀಕರಿಸಬೇಕು ಮತ್ತು ಕ್ಯಾಪಿಟೇಶನ್ ಶುಲ್ಕ ರದ್ದಾಗಬೇಕು. ಪಠ್ಯ ಪುಸ್ತಕಗಳು ಸುಲಭ ಬೆಲೆಗಳಲ್ಲಿ ದೊರೆಯುವಂತಾಗಬೇಕು.

9. ರಾಜ್ಯ ಭಾಷೆ ಕನ್ನಡ ಆಗಬೇಕು, ಸರ್ಕಾರ ಮತ್ತು ನ್ಯಾಯಾಲಗಳ ವ್ಯವಹಾರಗಳು ಕನ್ನಡದಲ್ಲೇ ನಡೆಯಬೇಕು.

10. ಮಹಿಳೆಯರಿಗೆ ಸಮಾಜದಲ್ಲಿ ಸಮಾನ ಅವಕಾಶ ಸಿಗಬೇಕು: ವರದಕ್ಷಿಣೆ ಮುಂತಾದ ಅನಿಷ್ಟ ಪದ್ಧತಿಗಳ ನಾಶವಾಗಬೇಕು.

11. ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗಗಳ ಮೇಲೆ ನಡೆಯುತ್ತಿರುವ ಅಮಾನುಷ ದಬ್ಬಾಳಿಕೆ ನಿಲ್ಲಬೇಕು.

ಸಾಮೂಹಿಕ ಸಂಘಟನೆಗಳು ಮೇಲ್ಕಂಡವುಗಳ ಬಗ್ಗೆ ಚಳವಳಿ ನಡೆಸಬೇಕು. ಅಲ್ಪಸಂಖ್ಯಾತ ಕೋಮುಗಳ ಮೇಲಿನ ದಾಳಿ ನಿಲ್ಲಬೇಕು ಹಾಗೂ ಅವರಿಗೆ ಸಮಾನ ಅವಕಾಶ ಮತ್ತು ಹಕ್ಕುಗಳು ಕಾರ್ಯರೂಪದಲ್ಲಿ ಖಚಿತವಾಗಬೇಕು. ಸಾಮೂಹಿಕ ಸಂಘಟನೆಗಳಲ್ಲಿ ಹಿಂದುಳಿದಿರುವ ಅಲ್ಪಸಂಖ್ಯಾತರನ್ನು ಸೇರಿಸಿ ಅವರ ವಿಶಿಷ್ಟ ಹಕ್ಕು ಬಾಧ್ಯತೆಗಳಿಗಾಗಿ ಹೋರಾಟಗಳನ್ನು ನಡೆಸಬೇಕು.

ನಮ್ಮ ರಾಜ್ಯ ಆರ್ಥಿಕವಾಗಿ ಹಿಂದುಳಿದಿದ್ದು, ಅದನ್ನು ನೀಗಿಸಲು ಕೆಳಗಿನ ಕಾರ್ಯಕ್ರಮಗಳನ್ನು ಜಾರಿ ಮಾಡಬೇಕು :—

1. ವಿಜಯನಗರ ಉಕ್ಕು ಕಾರ್ಖಾನೆಯ ಸ್ಥಾಪನೆ.

2. ಬೆಂಗಳೂರು – ಗುಂತಕಲ್, ಬೆಂಗಳೂರು – ಮೀರಜ್, ಹುಬ್ಬಳ್ಳಿ-ಸೋಲಾಪುರ, ಬೆಂಗಳೂರು-ಮೈಸೂರು —ಈ ರೈಲು ಮಾರ್ಗಗಳನ್ನು ಶೀಘ್ರವಾಗಿ ಬ್ರಾಡ್‌ಗೇಜ್‌ಗೆ ಪರಿವರ್ತಿಸುವುದು.

3. ಕ್ಷಾಮಪೀಡಿತ ಪ್ರದೇಶಗಳಾದ ಬೀದರ್, ಗುಲ್ಬರ್ಗ. ಬಿಜಾಪುರ, ಕೋಲಾರ, ತುಮಕೂರು ಇತ್ಯಾದಿಗಳಲ್ಲಿ ಸಾರ್ವಜನಿಕ ಕ್ಷೇತ್ರದ ಉದ್ಯಮಗಳನ್ನು ಸ್ಥಾಪಿಸುವುದು.

4. ಕಾರವಾರ ಬಂದರನ್ನು ಮುಖ್ಯ ಬಂದರಾಗಿ ಪರಿವರ್ತಿಸುವುದು.

5. ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸಲು ಕ್ರಮ ವಹಿಸುವುದು.

ಈ ಸಮಾವೇಶವು ರಾಜ್ಯ ಸರ್ಕಾರವು ಜನರಿಂದ ದೂರವಾಗುತ್ತಿರುವುದನ್ನು ಗಮನಿಸುತ್ತಿದೆ. ರಾಜ್ಯದ ಹಲವು ನಗರ ಸಭೆಗಳಿಗೆ ಚುನಾವಣೆಗಳು ಹಲವಾರು ವರ್ಷಗಳಿಂದ ನಡೆದಿಲ್ಲ. ಚುನಾವಣೆಗಳಿಗೆ ಬದಲಾಗಿ ನಾಮಕರಣ ಮಾಡುವ ಪದ್ಧತಿಯು ಜನತೆಯ ಪ್ರಜಾತಾಂತ್ರಿಕ ಹಕ್ಕುಗಳಿಗೆ ಮಾಡಿರುವ ಅಪಮಾನವಾಗಿದೆ. ಆದ್ದರಿಂದ ಈ ಸಮಾವೇಶವು ಎಲ್ಲ ನಗರ ಸಭೆಗಳಿಗೂ ಕೂಡಲೇ ಚುನಾವಣೆಗಳನ್ನು ನಡೆಸಬೇಕೆಂದು ಒತ್ತಾಯಿಸುತ್ತವೆ.

ನಗರಗಳಲ್ಲಿ ವಸತಿಯ ಅಭಾವವಿರುವುದನ್ನು ನೀಗಿಸಬೇಕು. ಆರ್ಥಿಕವಾಗಿ ಹಿಂದುಳಿದಿರುವ ಎಲ್ಲರಿಗೂ ಉಚಿತ ನಿವೇಶನಗಳನ್ನು ವಿತರಣೆ ಮಾಡಲು ಕ್ರಮ ವಹಿಸಬೇಕು, ಅವರುಗಳಿಗೆ ಮನೆಗಳನ್ನು ಕಟ್ಟಲು ಎಲ್ಲ ಸೌಲಭ್ಯಗಳನ್ನು ಒದಗಿಸಬೇಕು. ನಗರಾಸ್ತಿ ಮಿತಿ ಕಾಯ್ದೆಯನ್ನು ದಕ್ಷತೆಯಿಂದ ಜಾರಿಗೊಳಿಸಬೇಕು.

ಮೇಲ್ಕಂಡ ಬೇಡಿಕೆಗಳ ಆಧಾರದಲ್ಲಿ ಸಮ್ಮೇಳನಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಎರಡು ತಿಂಗಳುಗಳ ಒಳಗೆ ನಡೆಸಬೇಕು.

ಮೇಲ್ಕಂಡ ತೀರ್ಮಾನಗಳನ್ನು ಜಾರಿಗೊಳಿಸಲು ಆಯಾ ಸಂಬಂಧಪಟ್ಟ ಸಾಮೂಹಿಕ ಸಂಘಟನೆಗಳು ಕೂಡಲೇ ಕಾರ್ಯಕ್ರಮಗಳನ್ನು ರೂಪಿಸಬೇಕು. ಸ್ಥಳೀಯ ಸಮ್ಮೇಳನಗಳು ಆಯಾ ಪ್ರದೇಶಗಳಿಗೆ ಅನ್ವಯಿಸುವ ವಿಶಿಷ್ಟ ಹಾಗೂ ಜನತೆಯ ಬೇಡಿಕೆಗಳನ್ನು ಆರಿಸಿಕೊಂಡು ಆ ಬಗ್ಗೆ ವ್ಯಾಪಕವಾದ ಚಳವಳಿ ನಡೆಸಬೇಕು. ಈ ಚಳವಳಿ–ಹೋರಾಟಗಳು ಸೆಪ್ಟೆಂಬರ್–ಅಕ್ಟೋಬರ್ ತಿಂಗಳುಗಳಲ್ಲಿ ತೀವ್ರವಾಗಿ ನಡೆಸಬೇಕು. ಜಿಲ್ಲಾ ಹಾಗೂ ಸ್ಥಳೀಯ ಸಮಾವೇಶಗಳ ನಂತರ ಅಕ್ಟೋಬರ್–ನವೆಂಬರ್ ತಿಂಗಳುಗಳಲ್ಲಿ ವಿಧಾನ ಸೌಧ ಚಲೋ ನಡೆಸಬೇಕು. ಈ ಚಳವಳಿಯ ಅಂಗವಾಗಿ ಮೆರವಣಿಗೆ, ಧರಣಿ, ಪಿಕೆಟಿಂಗ್, ಸತ್ಯಾಗ್ರಹ ಮುಂತಾದುವುಗಳನ್ನು ಎಲ್ಲಾ ಕೇಂದ್ರಗಳಲ್ಲೂ ನಡೆಸಿ, ಸಾಮಾನ್ಯ ಜನತೆ ಭಾಗವಹಿಸುವಂತೆ ಮಾಡಬೇಕು.

ಸಿ.ಪಿ.ಐ. ಹಾಗೂ ಸಿ.ಪಿ.ಐ.(ಎಂ) ಪಕ್ಷಗಳ ರಾಜ್ಯ ಸೆಕ್ರೆಟೇರಿಯಟ್‌ಗಳು ಮೇಲಿನ ಕಾರ್ಯಕ್ರಮಕ್ಕೆ ಮಾರ್ಗದರ್ಶನ ನೀಡಬೇಕು.

ಮೇಲ್ಕಂಡ ಕಾರ್ಯಕ್ರಮಗಳನ್ನು ದಕ್ಷತೆ ಹಾಗೂ ಕ್ರಿಯಾಶೀಲತೆಗಳಿಂದ ಜಾರಿಗೊಳಿಸಬೇಕೆಂದು ಎರಡೂ ಪಕ್ಷಗಳ ಸದಸ್ಯರು, ಹಿತೈಷಿಗಳು ಹಾಗೂ ಪ್ರಜಾಪ್ರಭುತ್ವವಾದಿಗಳನ್ನು ಈ ಸಮಾವೇಶ ಪ್ರಾರ್ಥಿಸುತ್ತದೆ.

○

ಸಂಪಾದಕೀಯ

(1ನೇ ಪುಟದಿಂದ)

ಈಗಿನ ಸಂದಿಗ್ಧ ಕಾರಿಘಟ್ಟದಲ್ಲಿ ರಾಷ್ಟ್ರಾಧ್ಯಕ್ಷರಾಗುವವರು ಎಲ್ಲ ಪಕ್ಷಗಳ ಮತ್ತು ಜನ ವಿಭಾಗಗಳ ವಿಶ್ವಾಸ ಪಡೆದವರಾಗಿರಬೇಕೆಂಬುದನ್ನೂ ಆದ್ದರಿಂದ ಪ್ರಧಾನಿಯವರು ವಿರೋಧ ಪಕ್ಷದವರೊಡನೆ ಸಮಾಲೋಚನೆ ನಡೆಸಿ ಸರ್ವ ಸಮ್ಮತ ಪಡೆಯಲು ಪ್ರಯತ್ನಿಸಬೇಕೆಂದು ಕಾಂಗ್ರೆಸ್ಸೇತರ ಪಕ್ಷಗಳು ತಮ್ಮ ಅಭಿಪ್ರಾಯವನ್ನು ಪ್ರಧಾನಿಯವರಿಗೆ ತಿಳಿಸಿದರು. ಅವರು ಈ ಅಭಿಪ್ರಾಯವನ್ನು ತಿರಸ್ಕರಿಸಿರುವರು. 1977ರಲ್ಲಿ ಜನತಾ ಪಕ್ಷವು ಬಹುಮತದಲ್ಲಿದ್ದಾಗಲೂ ಎಲ್ಲ ಪಕ್ಷಗಳ ಅಭಿಪ್ರಾಯವನ್ನು ಪಡೆದು ಸರ್ವ ಸಮ್ಮತ ಉಮೇದುವಾರರನ್ನು ನಿಲ್ಲಿಸಿತು. ಈಗ ಇಂದಿರಾರವರು ಇದನ್ನು ಯಾಕೆ ಒಪ್ಪುತ್ತಿಲ್ಲ ? ತನ್ನ ಕೈಗೊಂಬೆಯಂತಿರುವನೊಬ್ಬನನ್ನು ಆರಿಸಬೇಕೆಂದಿರುವರೇ ? ಈ ತೆರನಾದ ಸಂಶಯ ಬರುವುದರಲ್ಲಿ ಆಶ್ಚರ್ಯವೇನಿಲ್ಲ. ಹರ್ಯಾಣದ ರಾಜ್ಯಪಾಲರು ಮುಖ್ಯ ಮಂತ್ರಿಯನ್ನು ಕೂಡಿಸಿದ ವೈಖರಿ, ಅಧಿಕಾರ ವಹಿಸಿದ ಬಳಿಕ "ಆಯಾರಾಮ್ ಗಯಾರಾಮ್"ಗಳನ್ನು ಸೇರಿಸಿಕೊಂಡು ಕೃತಕ ಬಹುಮತ ಗಳಿಸಲು ನಡೆಸಿದ ಪ್ರಯತ್ನಗಳು, ಇಂಥ ಹೇಯ ಕೃತ್ಯಗಳು ಇತರ ಸಂದರ್ಭಗಳಲ್ಲೂ ನಡೆಯಬಹುದು. ಅದಕ್ಕೆ ಬೇಕಾಗಿ ಎಲ್ಲ ಸಂದರ್ಭಗಳಲ್ಲೂ ತನಗೆ ಕಣ್ಣು ಮುಚ್ಚಿ ಬೆಂಬಲಿಸುವ ಮೂರ್ತಿಯನ್ನು ಅಧ್ಯಕ್ಷ ಪೀಠದಲ್ಲಿ ಕೂಡಿಸುವ ಸಂಚು ನಡೆದಿದೆ. ಸರ್ವ ಸಮ್ಮತಕ್ಕೆ ಪ್ರಧಾನಿಯವರು ಮುಂದೆ ಬರಬೇಕೆಂದು ವಿರೋಧ ಪಕ್ಷಗಳ ಪ್ರಯತ್ನಗಳು ವಿಫಲಗೊಂಡರೆ ಸ್ಪರ್ಧೆ ನಡೆಯಬಹುದೇ ? ಸಾಂಕೇತಿಕ ಸ್ಪರ್ಧೆಗಳು ಹಿಂದೆ ನಡೆದಿದ್ದವು.

ಅಧ್ಯಕ್ಷ ಸ್ಥಾನದ ಗೌರವವನ್ನು ರಕ್ಷಿಸುವ ದೃಷ್ಟಿಯಿಂದ ಪ್ರಧಾನಿಯವರು ಈ ಕೊನೆ ಘಳಿಗೆಯಲ್ಲಾದರೂ ಎಲ್ಲರೂ ಒಪ್ಪುವ ಸರ್ವ ಸಮ್ಮತಕ್ಕೆ ಮಣಿಯುವರೆಂದು ನಂಬುತ್ತೇವೆ. ಆದರೆ ಎಲ್ಲ ತತ್ವಗಳನ್ನೂ ಗಾಳಿಗೆ ತೂರಿ ಸರ್ವಾಧಿಕಾರಿ ಧೋರಣೆಯನ್ನನುಸರಿಸುತ್ತಿರುವ ಇಂದಿರಾರವರು ಇದನ್ನು ಒಪ್ಪುವಂತೆ ಮಾಡುವ ಹೊಣೆ ಜನತೆಯ ಮೇಲಿದೆ. ಎಲ್ಲರೂ ಒಪ್ಪುವ ರಾಷ್ಟ್ರಾಧ್ಯಕ್ಷರು ಆಯ್ಕೆಯಾಗಲಿ. ಇದೇ ತತ್ವದ ಮೇಲೆ ಕೇಂದ್ರದ ಹೊಸ ಚುನಾವಣಾಧಿಕಾರಿಯ ನೇಮಕವೂ ಆಗಲೆಂದು ನಮ್ಮ ಹಾರೈಕೆ.

---

೧೯ ಸಾವು; ೮೦೦ ಕುಟುಂಬಗಳು ನಿರಾಶ್ರಿತರು

(1 ನೇ ಪುಟದಿಂದ)

ಆದಾಯದ ಮನೆಗಳನ್ನು ಭದ್ರಪಡಿಸದೆ ಕಟ್ಟುವುದರಿಂದ ಅಪಾಯವೂ ಹೆಚ್ಚು.

ಜೀವದ ಹಂಗುತೊರೆದು ನೆರೆಪೀಡಿತರನ್ನು ದೋಣಿಗಳ ಮೂಲಕವೂ ಇತರ ರೀತಿಯಲ್ಲಿಯೂ ರಕ್ಷಿಸಿದವರು ಅಜ್ಞಾತರಾಗಿದ್ದಾರೆ. ಅವರೆಲ್ಲರ ಸೇವೆ ಶ್ಲಾಘನೀಯವೆಂದೂ ಜನರೇ ಆಡಿಕೊಳ್ಳುವಂತಾಗಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಉಡುಪಿ ಸಮಿತಿಯು ನೆರೆ ಪ್ರವಾಹ ಪೀಡಿತ ನಿರಾಶ್ರಿತರಿಗೂ ಮತ್ತು ಬಂಧುಗಳನ್ನು ಸರ್ವಸ್ವವನ್ನು ಕಳೆಕೊಂಡು ದುಃಖಿತರಾಗಿರುವ ಕುಟುಂಬಗಳವರಿಗೆ ತನ್ನ ಗಾಢವಾದ ಸಹಾನುಭೂತಿ ಮತ್ತು ಸಂತಾಪವನ್ನು ವ್ಯಕ್ತಪಡಿಸಿದೆ. ಪುನರ್ವಸತಿ ಕಾರ್ಯದಲ್ಲಿ ಪಾರ್ಟಿ ಸದಸ್ಯರು ಸಂಪೂರ್ಣವಾಗಿ ಸಹಕರಿಸಿ ದುಡಿಯಬೇಕೆಂದೂ ಕರೆ ನೀಡಿದೆ.

ಕಲ್ಸಂಕ ತೋಡಿನ ದುರಂತದ ಮೂಲ ಕಾರಣಗಳನ್ನು ಕಂಡು ಹಿಡಿದು ನೀರು ಹರಿಯಲು ಅಡ್ಡ ಬಂದಿರುವ ತಡೆಗಳನ್ನು ತೆಗೆದು ದುರುಸ್ತಿಪಡಿಸಬೇಕು ತಗ್ಗು ಪ್ರದೇಶಗಳ ಭೀತರಾಗಿರುವವರಿಗೆ ಧೈರ್ಯ ನೀಡಿ ಭದ್ರತೆಯೊದಗಿಸಬೇಕು. ತಾತ್ಕಾಲಿಕ ಪರಿಹಾರದ ಜತೆಯಲ್ಲಿಯೇ ಭದ್ರವಾದ ಮನೆಗಳನ್ನು ಸರಕಾರದ ವತಿಯಿಂದಲೇ ಒದಗಿಸಿಕೊಡುವ ವ್ಯವಸ್ಥೆಯಾಗದಿದ್ದಲ್ಲಿ ಎಲ್ಲಾ ಸರಕಾರದ ಕೆಲಸಗಳಂತೆಯೇ ಭ್ರಷ್ಟಾಚಾರ ತಾಂಡವಾಡೀತು ಅಲ್ಲದೆ ನೆರೆಪೀಡಿತರಿಗೆ ಹೆಚ್ಚಿನ ಸಹಾಯವಾಗಲಾರದು ಎಂದು ಸರಕಾರವನ್ನು ಒತ್ತಾಯಿಸಿದೆ.

●

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053. Editorial and managerial office :L-56, K. V. Temple Street ,Sultanpet, Bangalore-560 053. Phone-24154. Printed at Ravee Traders, No. 8/1, J. M. Lane, Balepet Cross, Bangalore-560 053. EDITOR ; M. K. BHAT,